I appoint the Minister for Revenue as the Chairman of the Committee and Minister for Law will be the Member.

Now, Karnataka Agricultural Produce Marketing (Regulation) (Amendment) Bill, 1975 may be taken up.

*KARNATAKA AGRICULTURAL PRODUCE MARKETING (REGULATION) (AMENDMENT) BILL, 1975. MOTON TO CONSIDER

ಶ್ರೀ ಎಚ್. ಡಿ. ದೇವೇಗೌಡ.—ನಾವು ಈ ಬಿಲ್ಲನ್ನು ಪಾಸು ಮಾಡುತ್ತೇವೆಂದು ಒಪ್ಪಿಕೊಂಡಿಲ್ಲ. ನಮಗೆ ಇಲ್ಲಿ ಇನ್ನು ಹಲವಾರು ಐಟಂಗಳು ಇವೆ. ಅವುಗಳನ್ನು ತಾವು ತೆಗೆದುಕೊಳ್ಳಬೇಕು. ಮಾನ್ಯ ಚಿಕ್ಕೇಗೌಡರಿಗೆ ಸಂಬಂಧಪಟ್ಟ ಗೊಬ್ಬರದ ಪ್ರಕರಣದ ಬಗ್ಗೆ ತಮ್ಮ ರೂಲಿಂಗ್ ಕೊಡಬೇಕಾಗಿದೆ.

ಶ್ರೀ ಕೊಣಂದೂರು ಲಿಂಗಪ್ಪ.—ನಮ್ಮ ರಾಜ್ಯದ ಮೆಡಿಕಲ್ ಕಾಲೇಜುಗಳ ರೆಕಗ್ನಿಷನ್ ಬಗ್ಗೆ ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

SRI M. M. SAJJAN.—My calling attention notice remains undisposed of.

ಅಧ್ಯಕ್ಷರು.—ಇದನ್ನೆಲ್ಲಾ ಕೊನೆಯಲ್ಲಿ ತೆಗೆದುಕೊಳ್ಳೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಬಿಲ್ಲನ್ನು ತಂದು ತಾವು ವ್ಯವಸಾಯಗಾರರ ಮೇಲೆ ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ಹಾಕುತ್ತೀರಿ. ಅರ್ಬನ್ ಟ್ಯಾಕ್ಸ್ ಹಾಕುತ್ತೀರಿ, ಮಾರ್ಕೆಟ್ ಯಾರ್ಡಿಗೆ ಯಾರು ...ರುತ್ತಾರೆ ಅವರೆಲ್ಲರೂ ಕೊಡಬೇಕಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಬೈಯರ್ಸ್ ಕೊಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲ, ಅದೂ ಸಹ ಕನ್‌ಸ್ಯೂಮರ್ಸ್ ಮೇಲೆ ಹೋಗುತ್ತದೆ.

4-00 P.M.

SRI H. M. CHANNABASAPPA (Minister for Public Works)—I beg to move:—

"That the Karnataka Agricultural Produce Marketing (Regulation) (Amendment) Bill, 1975 be taken into consideration"

MADAM SPEAKER.—Motion moved—

"That the Karnataka Agricultural produce Markeiting (Regulation) (Amendment) Bill, 1975 may be taken into consideration."

†SRI H. M. CHANNABASAPPA—Madam speaker, there has been incessant demand both within and outside the Legislature to provide adequate communication facilities to all the villages in the State in order that the agriculturists may better utilise the facilities offered by the Regulated Markets Act. Inspite of *adhoc* allotment made in the past, it has not been possible to meet this demand. It was mainly due to lack of regulated flow of funds. It is therefore considered necessary to provide levy of market fee on the sellers also and the proceeds thereof would go to the development of road. Hence this Bill

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ತರಾತುರಿಯಲ್ಲಿ ಈ ಬಿಲ್ಲನ್ನು ಇಂಟ್ರಾಡ್ಯೂಸ್ ಮಾಡಿದ್ದಾರೆ, ಇದರ ಬಗ್ಗೆ ಮಾನ್ಯ ಚೆನ್ನಬಸಪ್ಪನವರ ಕಾತುರತೆ ನನಗೆ ಗೊತ್ತಾಗುತ್ತದೆ. ರಸ್ತೆಗಳಿಗೆ ಹಣವನ್ನು ಒದಗಿಸತಕ್ಕದ್ದರಲ್ಲಿ ಅವರು ಹೆಚ್ಚು ಆಸಕ್ತಿಯನ್ನು ಇಟ್ಟುಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶದ ರಸ್ತೆಗಳನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು ಅದಕ್ಕೆ ಏನಾದರೂ ಪ್ರಯತ್ನ ನಡೆಯಬೇಕು ಎನ್ನುವ ಉದ್ದೇಶ ದಿಂದ ಇದನ್ನು ತಂದಿದ್ದಾರೆ. ಆದರೆ ಇವತ್ತು ನಾವು ಈ ಬಿಲ್ಲನ್ನು ತರಾತುರಿಯಿಂದ ಮಾಡಿ ಕೊಡುವುದು ಕಷ್ಟವಾಗುತ್ತದೆ. ಏಕೆಂದರೆ. ಇದರ ಬಗ್ಗೆ ಸಾಕಷ್ಟು ವಿವರಗಳು ಬೇಕು, ಎಷ್ಟು ಫಂಡ್ಸ್ ಬರುತ್ತದೆ, ರೈತರು ಎಷ್ಟು ಕೊಡಬೇಕು ಎನ್ನುವುದು ಇದರಿಂದ ಗೊತ್ತಾಗಬೇಕು. ನಾವು ಒಂದು ಪ್ರಿನ್ಸಿಪಲ್ ಅನ್ನು ಒಪ್ಪಿಕೊಂಡರೆ ನಾವು ಇದನ್ನು ಪಾಸ್ ಮಾಡಿಕೊಡುತ್ತೇವೆ. ನಾಳೆ ಗ್ರಾಮಾಂತರ ಪ್ರದೇಶಗಳಲ್ಲಿ ಆಗತಕ್ಕ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೂ ಫಂಡ್ ಮಾಡಿಕೊಂಡು ಕೆಲಸ ಮಾಡಿಸಬೇಕಾಗುತ್ತದೆ. ರಸ್ತೆಗಳು, ಆಸ್ಪತ್ರೆಗಳು, ಸ್ಕೂಲು ಬಿಲ್ಡಿಂಗ್‌ಗಳು ಇವೆಲ್ಲವನ್ನು ಮಾಡಬೇಕಾದರೂ ನಾವು ಅವರ ಮೇಲೆ ಕರಭಾರ ಮಾಡಬೇಕಾಗುತ್ತದೆ ಎನ್ನುವ ವಾದವನ್ನು ಮಾನ್ಯ ಸಚಿವರು ನಮ್ಮ ಮುಂದೆ ಇಡುತ್ತಿದ್ದಾರೆ. ಮುಂದೆ ಈ ರೀತಿಯಾಗಿ ಎಷ್ಟೋ ಹೊಸ ತೆರಿಗೆಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಸ್ಟೇಟ್ ಎಕ್ಸ್‌ಚೆಕ್ಕರ್‌ಗೆ ಬರತಕ್ಕ ಬೇರೆ ಬೇರೆ ವಿಧವಾದ ತೆರಿಗೆಗಳಲ್ಲಿ ಇವರಿಗೆ ಒಂದು ಭಾಗಾಂಶ ಬೇಡವೇ ? ಅವನ ಒಂದು ಕಲ್ಯಾಣಕ್ಕಾಗಿ ಸ್ಟೇಟ್ ಎಕ್ಸ್‌ಚೆಕ್ಕರ್ ಇಂದ ಬರತಕ್ಕ ಹಣ ಎಷ್ಟು ? ಆದ್ದರಿಂದ ನಾವು ಶಾಸ್ತ್ರೀಯವಾಗಿ ಟ್ಯಾಕ್ಸ್ ಸ್ಟ್ರಕ್ಚರ್ ಅನ್ನು ಮಾಡಬೇಕಾಗುತ್ತದೆ. ಹಳ್ಳಿಯಲ್ಲಿ ರತಕ್ಕವರು ಎಕ್ಸ್ ಸ್ ಟ್ಯಾಕ್ಸ್ ಕೊಡುತ್ತಾರೆ, ಸೇಲ್ಸ್ ಟ್ಯಾಕ್ಸ್‌ಕೊಡುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ರಸ್ತೆಗಳು ಆಗಬೇಕು, ಎಂದರೆ, ಮತ್ತೆ ಇನ್ನೊಂದು ತೆರಿಗೆಯಿಂದ ರಸ್ತೆಯನ್ನು ಮಾಡಿಸಿಕೊಳ್ಳಲಿ ಎಂದು ಹೇಳುತ್ತಾರೆ. ಆದರೆ ನೀವು ಏನು ಮಾಡುತ್ತೀರಿ ? Basically I oppose it ಬಯರ್ ಮೇಲೆ ತೆರಿಗೆಯನ್ನು ಹಾಕಿರಿ, ಸಂಲಭವಾಗಿ ಕನ್‌ಸ್ಯೂಮರ್‌ನ ಮೇಲೆ ಹಾಕುತ್ತೀರಿ ಅವನು ಕೊಡುತ್ತಾನೆ. ಇದಕ್ಕೆ ನಾನು ಅನೇಕ ನಿದರ್ಶನಗಳನ್ನು ಕೊಡುತ್ತೇನೆ ಅನೇಕ ಕಡೆ ರೆಗ್ಯುಲೇಟೆಡ್ ಮಾರ್ಕೆಟ್ಸ್ ಇಲ್ಲ. ರಾಜ್ಯದಲ್ಲಿ ಸರಿಯಾದ ಮಾರ್ಕೆಟ್‌ಗಳು ೧೦–೨೦ ಇರಬಹುದು. ಗಂಗಾವತಿ, ಬೆಳಗಾಂ, ದಾವಣಗೆರೆ, ತಿಪಟೂರು ಮುಂತಾದಕಡೆಗಳಲ್ಲಿ ಮಾರ್ಕೆಟ್‌ಗಳು ಇರಬಹುದು. ಉದಾಹರಣೆಗೆ ಹೇಳುವುದಾದರೆ, ನನ್ನ ಊರಲ್ಲಿ ಒಂದು ಸಬ್ ಮಾರ್ಕೆಟ್ ಇದೆ. ಮುನಿಸಿಪಲ್ ಟೋಲ್ ಗೇಟ್ ಒಳಗೆ ಸಾಮಾನುಗಳು ಬಂದರೆ ಅದಕ್ಕೆ ತೆರಿಗೆ ಹಾಕುತ್ತಾರೆ, ಒಂದು ಜೊತೆ ಎತ್ತನ್ನು ಹಿಡಿದುಕೊಂಡು ಬಂದರೆ ಅದಕ್ಕೂ ಲೆಕ್ಕ ಕೊಡಬೇಕಾಗುತ್ತದೆ. ಈರೀತಿಯಾದರೆ ನೀವು ಯಾರ ಮನೆಯನ್ನು ಹಾಳು ಮಾಡಬೇಕಾಗುತ್ತದೆ ? ಆದ್ದರಿಂದ ನಾನು ಇದನ್ನು ಅಪೋಸ್ ಮಾಡುತ್ತೇನೆ'. ಬಯರ್ ಮೇಲೆ ಟ್ಯಾಕ್ಸ್ ಹಾಕುತ್ತೇವೆಂದು ಹೇಳಿ ಒಪ್ಪಿಕೊಳ್ಳುತ್ತೇನೆ', ಇದಕ್ಕೆ ಚರ್ಚೆಯೇ ಬೇಡ. ಸೆಲ್ಲರ್ಸ್ ಮೇಲೆ' ತೆರಿಗೆ ಹಾಕುತ್ತೇವೆ ಎಂದರೆ, ಅವನು ಏನನ್ನು ಮಾರ್ಕೆಟ್‌ಗೆ ತಂದರೂ ತೆರಿಗೆಯನ್ನು ಕೊಡಬೇಕಾಗುತ್ತದೆ. ಇದು ಸಾಧ್ಯವಿಲ್ಲ. ಸೆಲ್ಲೆರ್ ಎನ್ನುವುದನ್ನು ಕಿತ್ತುಹಾಕಿ ಬೈಯರ್ ಎಂದು ಹಾಕಿ ತಮ್ಮ ಅಮೆಂಡ್‌ಮೆಂಟನ್ನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ಗಂಟೆಗಟ್ಟಲೆ ಚರ್ಚೆ ಮಾಡುವುದು ಬೇಡ. ನಮಗೂ ಮಾತನಾಡಿ ಸಾಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲಾ ಕಡೆಗಳಲ್ಲಿಯೂ ಮಾರ್ಕೆಟ್ ಇಲ್ಲ, ಮಾರ್ಕೆಟ್‌ಯಾರ್ಡ್ ಎಂದು ಇಲ್ಲಿ, ಈಗ ಸೆಲ್ಲರ್ಸ್ ಎಂದು ಹಾಕಿರುವುದರಿಂದ ಯಾರಾದರೂ ಒಂದು ಹತ್ತು ಕೋಳಿಗಳನ್ನು ತಂದರೂ ಹತ್ತು ಪೈಸೆ ಟ್ಯಾಕ್ಸ್ ಕೊಡಬೇಕಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನೀವು ರೂರಲ್ ರೋಡುಗಳು ಬೇಡ ಎಂದರೆ ಆ ರೀತಿ ಮಾಡಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಸೆಲ್ಲರ್ ಎನ್ನುವುದನ್ನು ತೆಗೆದು ಬೈಯರ್ ಎಂದು ಹಾಕಿ. ನಮ್ಮ ಯಾವ ತಕರಾರೂ ಇಲ್ಲ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ಶ್ರೀಮಾನ್ ಲೋಕೋಪಯೋಗಿ ಸಚಿವರು ಮಂಡಿಸಿದಂಥ ಈ ತಿದ್ದುಪಡಿ ಮಸೂದೆಯನ್ನು, ದಿ ಕರ್ನಾಟಕ ಅಗ್ರಿಕಲ್‌ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ (ರೆಗ್ಯುಲೇಷನ್) ಅಮೆಂಡ್‌ಮೆಂಟ್ ಬಿಲ್, ೧೯೭೩ರ ಮಸೂದೆಯನ್ನು ನಾನು ಕಟುವಾಗಿ ವಿರೋಧ ಮಾಡಬೇಕಾಗಿದೆ. ಏತಕ್ಕೆಂದರೆ ಈವೊತ್ತಿನ ದಿವಸ ಚನ್ನಬಸವಪ್ಪನವರು ಗ್ರಾಮಾಂತರ ಪ್ರದೇಶದ ರಸ್ತೆಗಳನ್ನ ಅಭಿವೃದ್ಧಿ ಪಡಿಸುವುದಕ್ಕೆ ಹಣ ಬೇಕು ಎಂದು ಏನು ಹೇಳುತ್ತಿದ್ದಾರೆ ಅದನ್ನು ಕಟುವಾಗಿ ನಾವು ವಿರೋಧ ಮಾಡಿದ್ದೇವೆ. ಇದಕ್ಕೆ ಏನು ಪ್ರತಿಫಲ ಎಂದರೆ ನಾವು ದುಡ್ಡು ಕೊಟ್ಟು ನಾವೇ ರಸ್ತೆ ರಿಪೇರಿ ಮಾಡಿಸಿ ಕೊಳ್ಳಬೇಕು. ಇಂಥಾ ಒಂದು ಸ್ಥಿತಿಗೆ ಅವರು ನಮ್ಮನ್ನು ತಂದಿಟ್ಟಿದ್ದಾರೆ. ಇದರ ಜೊತೆಗೆ ಮತ್ತೊಂದು ತೆರಿಗೆಯನ್ನು ಹೊಸದಾಗಿ ಹಾಕುವುದಕ್ಕೆ ಹೊರಟಿದ್ದಾರೆ. ಆದುದರಿಂದ

ನಾನು ಹೇಳುವುದು ನಮ್ಮ ಹಣವನ್ನು ವಸೂಲ್ಮಾಡಿ ನಮ್ಮ ರಸ್ತೆಗಳನ್ನು ಮಾಡಿಕೊಡಲು ಹೊರಟರೆ ಸರ್ಕಾರ ಏತಕ್ಕೆ ಇರುವುದು ಎಂದು ಕೇಳುತ್ತೇನೆ. ಮತ್ತು ಸರ್ಕಾರ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಏನು ಖರ್ಚು ಮಾಡುತ್ತಿದ್ದಾರೆ ಎನ್ನುವ ಪ್ರಶ್ನೆಯನ್ನು ನಾವು ಎತ್ತಬೇಕಾಗಿದೆ, ನಾವು ಮೊದಲಿನಿಂದಲೂ ಈ ಮಾತನ್ನು ಹೇಳುತ್ತಿದ್ದೇವೆ. ಸರ್ಕಾರ ಪ್ರತಿವರ್ಷವೂ ಕೂಡ ಎನ್. ಜಿ. ಒ. ಸಂಬಳಸಾರಿಗೆ ೫-೧೦ ಕೋಟಿ ರೂಪಾಯಿ ಕೊಡುತ್ತಾ ಬಂದಿದ್ದಾರೆ. ಇದಲ್ಲದೆ ಮೊನ್ನೆ ತಾನೇ ಸರ್ಕಾರೀ ನೌಕರರಿಗೆ ಸಂಬಳ ಸಾರಿಗೆ ಹೆಚ್ಚಿಸಿದ್ದರಿಂದ ೨೦ ಕೋಟಿ ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶದ ಜನರಿಗೆ ಯಾವ ಸಂದರ್ಭದಲ್ಲಾದರೂ ಆಗಲಿ ಏನು ಕೊಡುತ್ತಾ ಬಂದಿದ್ದೀರಿ ಅನ್ನುವುದನ್ನು ಹೇಳಿ. ನೀವು ಆ ಗ್ರಾಮಾಂತರ ಪ್ರದೇಶದ ಜನರಿಗೆ ೫ ಕೋಟಿ ಅಲ್ಲ ೧೦ ಕೋಟಿ ರೂಪಾಯಿಯಾದರೂ ಕೊಟ್ಟು ಅಲ್ಲಿನ ಅಭಿವೃದ್ಧಿ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವ ಒಂದು ವ್ಯವಸ್ಥೆ ಮಾಡಿ ಎಂದು ಮೊದಲಿನಿಂದಲು ಒತ್ತಾಯ ಪಡಿಸುತ್ತಾ ಬಂದಿದ್ದೇವೆ. ಇದನ್ನು ಈವೊತ್ತಿನ ವರೆಗೂ ಮಾಡಿಲ್ಲ ಆದರೆ ಈಗ ನೀವು ಮಾಡುತ್ತಾ ಇರುವುದು ಏನು. ಗ್ರಾಮಾಂತರ ಪ್ರದೇಶದಲ್ಲಿರುವ ಜನರಿಗೆ ತೆರಿಗೆ ಹಾಕಿ, ಹಾಕಿ ವಸೂಲ್ಮಾಡುತ್ತೀರೇ ವಿನಾ ಅವರಿಗೆ ಯಾವ ಕೆಲಸ ಮಾಡಿಕೊಡಬೇಕೋ ಅದನ್ನು ಮಾಡಿಕೊಡುತ್ತಾ ಇಲ್ಲ. ಇಲ್ಲಿ ಇರುವ ಪ್ರತಿನಿಧಿಗಳಲ್ಲಿ ಬಹುಭಾಗದ ಜನರು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥವರೇ. ಅಂಥಾದ್ದರಲ್ಲಿ ಅವರಿಗೆ ಯಾವ ಒಂದು ಕಲ್ಪನೆಯೂ ತೋರಿಸ ದಿದ್ದರೆ ಅದನ್ನು ಸಹಿಸಿಕೊಂಡು ಇರುವುದಕ್ಕಾಗುವುದಿಲ್ಲ. ಈ ಮಾರ್ಕೆಟ್‌ಗಳನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ, ಆ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಈ ತೆರಿಗೆಯಿಂದ ಬಂದಂಥ ಹಣವನ್ನು ಸಂಗ್ರಹಿಸಿ ಒಂದು ಫಂಡ್ ಮಾಡಿ ಇಟ್ಟುಕೊಳ್ಳುತ್ತೇವೆ ಎಂದು ಬಹಳ ಸಾರಿ ಹೇಳಿದ್ದೀರಿ. ಆದರೆ ಮಾರ್ಕೆಟ್ ಅಭಿವೃದ್ಧಿ ಪಡಿಸುವುದು ರೈತನ ಹಿತದೃಷ್ಟಿಯಿಂದ ಆಗುವುದಾದರೆ ಸರಿ. ಆದರೆ ಈವೊತ್ತಿನ ದಿವಸ. ಆ ಮಾರ್ಕೆಟ್ ಅಭಿವೃದ್ಧಿ ರೈತನ ಹಿತದೃಷ್ಟಿಯಿಂದ ಆಗಿಲ್ಲ. ಅಲ್ಲಿರತಕ್ಕಂಥ ಅಡ್ಮಿನಿಸ್ಟ್ರೇಟರ್ ಏನು ಮಾಡಿದ್ದಾರೆ ಎಂದರೆ ೪-೫ ಲಕ್ಷ ರೂಪಾಯಿನ ಬಿಲ್ಡಿಂಗ್ ಕಟ್ಟಿಕೊಂಡು ಅದನ್ನು ಗೆಸ್ಟ್ ಹೌಸ್ ಮಾಡಿಕೊಂಡಿದ್ದಾರೆ. ಅದರಿಂದ ಈವೊತ್ತು ಯಾವ ಒಬ್ಬ ವ್ಯವಸಾಯಗಾರನಿಗೂ ಕೂಡ ಆ ಮಾರ್ಕೆಟ್ ಪ್ರದೇಶದಲ್ಲಿ ಏನು ಪ್ರಯೋಜನವೂ ಸಿಗುತ್ತಾ ಇಲ್ಲ. ಮತ್ತು ಅವನು ಏನು ಪ್ರಯೋಜನವನ್ನೂ ಅದರಿಂದ ಪಡೆಯುತ್ತಾ ಇಲ್ಲ. ಇಷ್ಟೇ ಅಲ್ಲ ಯಾವುದೇ ಸಾಮಾನನ್ನು ಪೇಟೆಯಲ್ಲಿ ಅವನು ತಂದರೆ ಅಲ್ಲಿರುವ ವ್ಯಾಪಾರಿಗಳು ಅವನನ್ನು ಏನು ಶೋಷಣೆ ಮಾಡಬೇಕೋ ಅದು ಆಗುತ್ತಾ ಇದೆ. ಈ ಶೋಷಣೆ ಜೊತೆಗೆ ಇನ್ನೂ ಇತರ ತೆರಿಗೆಗಳನ್ನು ಹಾಕಿ ಅವನನ್ನು ಸಂಪೂರ್ಣವಾಗಿ ಶೋಷಣೆ ಮಾಡು ವುದಕ್ಕೆ ಹೊರಟಿದ್ದೀರಿ. ಆದುದರಿಂದ ಈ ರಸ್ತೆಗಳನ್ನು ರಿಪೇರಿ ಮಾಡಿಕೊಡುವುದಕ್ಕೋಸ್ಕರ ಈ ಹೊಸ ತೆರಿಗೆಯನ್ನು ಹಾಕುವುದಾದರೆ ಅದನ್ನು ನಾವು ಪ್ರತಿಭಟಿಸಲೇ ಬೇಕಾಗುತ್ತದೆ. ಇದರಿಂದ ೫ ಕೋಟಿ ಬರುತ್ತದೆ ಅನ್ನುವುದಾದರೆ ಅಷ್ಟು ಬರುವುದಿಲ್ಲ ಮತ್ತು ಸರ್ಕಾರದವರು ಎಷ್ಟು ಹಣ ಸೇರಿಸುತ್ತಾರೆ ಅನ್ನುವುದನ್ನು ಇದರಲ್ಲಿ ಹೇಳಿಲ್ಲ. ಆದುದರಿಂದ ಹಿಂದೆ ಯಾವ ರೀತಿ ಇತ್ತೋ ಟ್ರೇಡರ್ಸ್ ಮತ್ತು ಬಯ್ಯರ್ಸ್ ಮೇಲೆ ವಸೂಲ್ಮಾಡುವ ಅಧಿಕಾರ ಏನು ಇತ್ತೋ ಅವರಿಂದ ಒಂದು ರೂಪಾಯಿ ಏನು ವಸೂಲ್ಮಾಡುತ್ತಿದ್ದರೊ ಅದನ್ನು ಬೇಕಾದರೆ ಎರಡು ರೂಪಾಯಿ ಮಾಡಲಿ. ಅದರೆ ವ್ಯವಸಾಯಗಾರರ ಮೇಲೆ ಹಾಕತಕ್ಕಂಥ ತೆರಿಗೆಯನ್ನು ನಾವು ಸಂಪೂರ್ಣವಾಗಿ ವಿರೋಧ ಮಾಡುತ್ತೇವೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ.)—ಮಾನ್ಯ ಅಧ್ಯಕ್ಷರೇ, ನಮ್ಮ ನಾಯಕರು ಹೇಳಿದ ಹಾಗೆ ರೈತರ ಬೆನ್ನುಮೂಳೆಯನ್ನು ಬಲಪಡಿಸುತ್ತೇವೆಂದು ಬಂದು ಕೂತಂಥ ಸರ್ಕಾರ ಅವರ ಬೆನ್ನನ್ನು ಮುರಿಯುವುದಕ್ಕೆ ಹೆಜ್ಜೆ ಇಡುತ್ತಾ ಬಂದಿದ್ದೀರಿ. ಈ ವೊತ್ತು ರೈತ ಯಾವ ಒಂದು ಬೆಳೆಯನ್ನಾದರೂ ಬೆಳೆದು ಒಂದು ಬುಟ್ಟಿಯಲ್ಲಿ ತಂದು ಮಾರ್ಕೆಟ್‌ಗೆ ಬಂದರೆ ಆದರ ಮೇಲೆ ಅವನು ಟ್ಯಾಕ್ಸ್ ಕೊಡಬೇಕಾಗಿದೆ. ಅವನು ಇದಕ್ಕೆ ಟ್ಯಾಕ್ಸ್ ಕೊಡಬೇಕು ಅನ್ನುವುದಾದರೆ ನಾನು ಶ್ರೀಮಾನ್ ಚೆನ್ನಬಸಪ್ಪನವರು ಕೇಳುತ್ತೇನೆ ಅವರು ಕಟ್ಟಾ ರೈತರು ಉಂಟೋ ಅಲ್ಲವೋ ಎಂದು ಕೇಳಬೇಕಾಗಿದೆ ನೀವು ಬೆಳೆದಂಥ ಬೆಳೆಯನ್ನು ಮಾರ್ಕೆಟ್‌ಗೆ ತಂದಿದ್ದೀರಾ ಎಂದು ಅವರನ್ನು ಕೇಳಬೇಕಾಗಿದ ಏತಕ್ಕೆಂದರೆ ರೈತರ ಬಗ್ಗೆ ಅವರಿಗೆ ಅನುಕಂಪ ಇರುವುದಾದರೆ ಅವರು ಬೆಳೆದದ್ದು ಯಾವರೀತಿಯೋ ಇರಲಿ ಅದನ್ನು ಯಾವರೀತಿ ಮಾರಾಟ ಮಾಡಬೇಕು ಅನ್ನುವುದನ್ನು ಹೇಳಿದರೆ ಅವರು ಅಷ್ಟು ಟ್ಯಾಕ್ಸ್ ಕೊಡುವುದಕ್ಕೆ ಸಿದ್ಧವಾಗಿದ್ದರೆ. ಅವರು ನಿಜವಾಗಿಯೂ ಹಳ್ಳಿಯವರಾಗಿದ್ದರೆ ಇದರ ಬಗ್ಗೆ ಸ್ಪಷ್ಟವಾಗಿ ಉತ್ತರ ಹೇಳಿದರೆ ಆವಾಗ ಮಾರಾಟ ಮಾಡುವಾಗ ಅದಕ್ಕೆ ತೆರಿಗೆ ಹಾಕುವುದಕ್ಕೆ ನನ್ನ ಅಡ್ಡಿ ಇಲ್ಲ. ನಾನೂ ಕೂಡ ಒಬ್ಬ ರೈತ, ನನಗೂ ಕೂಡ ಇದರ ಅನುಭವ ಇದೆ. ಟಿಪ್ಪೂಸುಲ್ತಾನ್‌ಗೆ ಹಸಿರುಕೂಡ ಹಿಡಿದ ಮೀರ್‌ಸಾದಿಕ್‌ನ ಹಾಗೆ ಎಲ್ಲದಕ್ಕೂ ಅಸ್ತು ಎಂದು ಹೇಳಿ ಎಲ್ಲದಕ್ಕೂ ರೈತರ ಮೇಲೆ ತೆರಿಗೆ ಹಾಕುವುದು ಸರಿಯಲ್ಲ. ಆದುದರಿಂದ ನಾನು ರೈತರ ಹಿತದೃಷ್ಟಿಯಿಂದ ಹೇಳುತ್ತೇನೆ. ಬೆಳೆದಂಥ ರೈತರ ಮೇಲೆ ತೆರಿಗೆ ಹಾಕದೆ ಟ್ರೇಡರ್ಸ್ ಮತ್ತು ಬೈಯ್ಯರ್ಸ್ ಮೇಲೆ ಹಾಕಿ; ಅವರಿಗೆ ರೋಡು ವಗೈರ ಮಾಡಿಕೊಡ

ಬೇಕು ಎಂದು ಹೇಳುತ್ತೇನೆ. ರೈತರಿಂದ ಏನು ಹಣ ವಸೂಲ್ಮಾಡುತ್ತೀರೋ ಅದು ನಿಜವಾಗಿಯೂ ಯಾರಿಗೆ ವಿನಿಯೋಗವಾಗುತ್ತದೆ ಎನ್ನುವ ಬಗ್ಗೆ ಅಜಮಾಯಿಷಿ ಆಗಬೇಕು. ಇಲ್ಲದೇ ಹೋದರೆ ಇನ್ನು ಮುಂದೆ ಗ್ರಾಮಸ್ವರಾಜ್ಯ ಅಂತ ಮಾಡಿ ಡಿ, ಬೆಂಗಳೂರಿಗೂ ಗ್ರಾಮಗಳಿಗೂ ಯಾವ ಸಂಬಂಧವೂ ಇಲ್ಲ ಎಂದು ಮಾಡಿಬಿಡಿ. ಆಮೇಲೆ ನಮ್ಮ ಊರಿನ ರೋಡು ಕೆರೆ ಮತ್ತು ಮೋರಿಗಳನ್ನು ರಿಪೇರಿ ಮಾಡಿಕೊಳ್ಳ ಬೇಕಾದರೆ ಮತ್ತು ಆಸ್ಪತ್ರೆ ಬೇಕಾದರೆ ನಾವೇ ಟ್ಯಾಕ್ಸ್ ಕಲಕ್ಟ್ ಮಾಡಿಕೊಂಡು ನಾವೇ ನಮ್ಮ ಊರಿನ ಅಭಿವೃದ್ಧಿ ಕಾರ್ಯಗಳನ್ನು ಮಾಡಿಕೊಳ್ಳುತ್ತೇವೆ. ಆ ರೀತಿ ಯಾಗಿ ನಮ್ಮ ನಮ್ಮ ಕ್ಷೇತ್ರವನ್ನು ಒಂದೊಂದು ರಾಜ್ಯವನ್ನಾಗಿ ಮಾಡುವುದಕ್ಕೆ ತಯಾರಾಗಿದ್ದೀರಾ? ಈ ರೀತಿ ಮಾಡುವುದಕ್ಕೆ ತಾವು ತಾತ್ವಿಕವಾಗಿ ಒಪ್ಪುವುದಾದರೆ ಕರ್ನಾಟಕ ಸರ್ಕಾರದ ರಾಜಧಾನಿ ಬೆಂಗಳೂರು ಏನು ಇದೆಯೋ ಅದು ಯಾವುದಕ್ಕೂ ಸೇರುವುದಿಲ್ಲ, ಮತ್ತು ಆಯಾಯಾ ಕ್ಷೇತ್ರವನ್ನು ಒಂದು ರಾಜ್ಯವನ್ನಾಗಿ ಮಾಡಿದರೆ ಅದು ಬೇರೆ ಯಾವ ರಾಜ್ಯದ ಹಳ್ಳಿಗಳ ಮೇಲೆ ಅಧಿಕಾರ ಇರುವುದಿಲ್ಲ. ಈ ರೀತಿಯಾಗಿ ತಾವು ಘೋಷಣೆ ಮಾಡಬೇಕು ಹಾಗೆ ತಾವು ಘೋಷಣೆ ಮಾಡುವುದಾದರೆ ಆವಾಗ ಇದನ್ನು ಒಪ್ಪಿಕೊಳ್ಳುವುದಕ್ಕೆ ನಾವು ಸಿದ್ಧವೇ ಹೊರತು ಅಲ್ಲಿಯವರೆಗೂ ಕೂಡ ರೈತರ ಹಿತದೃಷ್ಟಿಯಿಂದ ಇದನ್ನು ಒಪ್ಪಿ ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಹಳ್ಳಿಗಳ ಉದ್ಧಾರ, ರೈತರ ಉದ್ಧಾರ ಎಂದು ಅವನ ಮೇಲೆ ಹೊಡೆಯುವುದು ಬೇಡ. ರೈತರ ಉದ್ಧಾರ ಎಂದು ಹೇಳಿ ಹಳ್ಳಿಗಳಿಂದ ಬಂದಂಥ ನೀವು ಆ ರೈತರ ಚರ್ಮ ಸುಲಿದು, ಆ ಚರ್ಮವನ್ನು ಟಮಟೆಗೆ ಹಾಕಿ, ಆ ಟಮಟೆಯನ್ನು ಬಾರಿಸಿಕೊಂಡು ಒಡ್ಡೋಲಗ ಮಾಡುವುದು ಬೇಡ ನಾವೆಲ್ಲಾ ರೈತರ ಹತ್ತಿರ ಹೋಗೋಣ. ಅವರ ಮೇಲೆ ಈ ರೀತಿ ತೆರಿಗೆ ಹಾಕುವುದು ಉಚಿತವೇ ಎಂದು ಕೇಳೋಣ. ಈಗ ಬೆಂಗಳೂರು ಕಾರ್ಪೋರೇಷನ್ನಿಗೆ ಟ್ಯಾಕ್ಸ್ ಮೂಲಕ ಅಪಾರವಾದ ಹಣ ಬರುತ್ತದೆ ಹೀಗೆ ಪಟ್ಟಣದಲ್ಲಿ ಬರುವಂಥಾ ಟ್ಯಾಕ್ಸನ್ನು ಸಂಗ್ರಹ ಮಾಡಿ ರೈತನ ಉದ್ಧಾರಕ್ಕೂ ಸ್ವಲ್ಪ ಕೊಡಿ, ರಸ್ತೆಗಳಿಗೆ ಕಾಂಕ್ರೀಟ್ ಹಾಕುವುದನ್ನು ತಪ್ಪಿಸಿ ಅವರಿಗೆ ಶಿಲ್ಪಿಂಗ್ ಕೆಲಸ ಮಾಡಿಸಿಕೊಟ್ಟರೆ ಈ ದೃಷ್ಟಿಯಿಂದಲಾದರೂ ರಾಜ್ಯದ ಹಳ್ಳಿ ರೈತರನ್ನು ರಕ್ಷಣೆ ಮಾಡಿದಂತಾಗುತ್ತದೆ. ಈ ದೃಷ್ಟಿಯಿಂದ ತಾವು ಟ್ರೇಡರ್ಸ್ ಮತ್ತು ಬಯ್ಯರ್ಸ್ ಮೊದಲು ಏನು ತೆರಿಗೆ ಇತ್ತೋ ಆ ರೀತಿಯಾಗಿ ಅವರ ಮೇಲೆ ಹಾಕುವುದಕ್ಕೆ ನನ್ನ ಅಭ್ಯಂತರ ವಿಲ್ಲ. ಆದರೆ ಬೆಳೆದಿರತಕ್ಕಂಥ ರೈತರ ಮೇಲೆ ತೆರಿಗೆ ಹಾಕತಕ್ಕಂಥಾದ್ದು ಅನ್ಯಾಯವಾಗುತ್ತದೆ ಮತ್ತು ಅವರಿಗೆ ಒಂದು ದೊಡ್ಡ ಮಹಾ ಅಪರಾಧ ಮಾಡಿದಂತಾಗುತ್ತದೆ. ಆದುದರಿಂದ ಯಾರು ಕೊಳ್ಳುತ್ತಾರೋ ಯಾರು ಮಾರಾಟ ಮಾಡುತ್ತಾರೋ ಅವರ ಮೇಲೆ ದಯವಿಟ್ಟು ಹಾಕಬೇಕು ಎಂದು ಹೇಳುತ್ತೇನೆಯೋ ಹೊರತು ಇನ್ನಾವ ಉದ್ದೇಶವೂ ಇಲ್ಲ ಅವರಿಗೆ ಇನ್ನೂ ಒಂದು ಪರ್ಸೆಂಟ್ ಹೆಚ್ಚಾಗಿ ಹಾಕಿ. ದೊಡ್ಡ ದೊಡ್ಡ ವ್ಯಾಪಾರಸ್ಥರು ಏನು ಇದ್ದರೋ ಅವರ ಮೇಲೆ ಹಾಕಿ ಅವರಿಗೆ ರಕ್ಷಣೆ ಕೊಡತಕ್ಕಂಥಾದ್ದು ಸರಿಯಲ್ಲ. ಇನ್ನೂ ಬೇಕಾದಷ್ಟು ಲಕ್ಸುರಿ ಆರ್ಟಿಕಲ್ಸ್ ಇದೆ, ಅದರ ಮೇಲೆ ತೆರಿಗೆ ಹಾಕಿ. ದುಡ್ಡು ಎಲ್ಲಿಂದ ಬರುತ್ತದೆ, ಯಾರಿಗೆ ಕೊಡುವವರಿಗೆ ಶಕ್ತಿ ಇದೆ ಅವರ ಮೇಲೆ ತೆರಿಗೆ ಹಾಕಿ; ಹಳ್ಳಿ ರೈತರನ್ನು ಉದ್ಧಾರ ಮಾಡಿ. ತಾವು ಆಡುವುದೊಂದು ಮಾಡುವುದೊಂದು ಈ ರೀತಿ ಕೆಲಸ ಮಾಡಬೇಡಿ. ಈ ಹೊತ್ತೇ ಮದ್ದೂರಿಗೆ ಹೋಗೋಣ ಪಿರಿಯಾಪಟ್ಟಣಕ್ಕೆ ಹೋಗೋಣ ಬನ್ನಿ. ನಿಮ್ಮ ರಸ್ತೆ ಮಾಡುವುದಕ್ಕೆ ನಾವು ಇಷ್ಟು ಟ್ಯಾಕ್ಸ್ ಹಾಕುತ್ತೇವೆ ಅಷ್ಟು ಹಣ ಕೊಡಿರಿ ಎಂದು ಕೇಳೋಣ, ಮದ್ದೂರ್ ರೈತರನ್ನು ಕೇಳೋಣ, ಪಿರಿಯಾಪಟ್ಟಣದ ರೈತರನ್ನು ಕೇಳೋಣ. ನಿಮ್ಮ ಹತ್ತಿರ ಇಷ್ಟು ಹಣವನ್ನು ವಸೂಲ್ಮಾಡುತ್ತೇವೆ ಎಂದು ಹೇಳೋಣ ಅವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ, ಆಮೇಲೆ ನೀವು ಅವರ ಮೇಲೆ ತೆರಿಗೆ ಹಾಕುವುದನ್ನೂ ಯೋಚನೆ ಮಾಡಬೇಕು. ಅದುವರೆಗೆ ಅವರ ಮೇಲೆ ಯಾವ ತೆರಿಗೆಯನ್ನೂ ಹಾಕದೆ ಬೇರೆ ಯಾವುದಾದರೂ ಮಾರ್ಗವನ್ನು ಅನುಸರಿಸಿ ಟ್ಯಾಕ್ಸ್ ವಸೂಲ್ಮಾಡಿ ಅದರಿಂದ ಬರತಕ್ಕಂಥ ಹಣದಿಂದ ರಸ್ತೆ ಕೆಲಸ ಮತ್ತು ಮೋರಿ ವಗೈರೆ ಕೆಲಸಗಳನ್ನು ಮಾಡಿಸಬೇಕೇ ಹೊರತು ವ್ಯವಸಾಯಗಾರರ ಮೇಲೆ ತೆರಿಗೆ ಹಾಕುವುದು ಸರಿಯಲ್ಲ ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈ ಸಭೆಯಲ್ಲಿ ಆಡಳಿತ ಕಾಂಗ್ರೆಸ್ ಸದಸ್ಯರು ೧೬೫ ಜನ ಇದ್ದಾರೆ. ಅವರಲ್ಲಿ ೨೫-೩೦ ಜನರನ್ನು ಬಿಟ್ಟರೆ ಬಾಕಿಯವರೆಲ್ಲರೂ ಕೂಡ ಹಳ್ಳಿಗಳಿಂದ ಬಂದವರೇ. ಶ್ರೀಮಾನ್ ಕೆ. ಎನ್. ವೀರಪ್ಪಗೌಡರಿಗೆ ಹೇಳುತ್ತೇನೆ ಬನ್ನಿ ಶೃಂಗೇರಿಗೆ ಹೋಗೋಣ ಯಾವ ಯಾವ ಸದಸ್ಯರು ಯಾವ ಯಾವ ಕ್ಷೇತ್ರದಿಂದ ಬಂದಿರುತ್ತಾರೋ ಅಲ್ಲಿಗೆ ನಾವೆಲ್ಲಾ ಹೋಗೋಣ. ಈ ಟ್ಯಾಕ್ಸ್ ಹಾಕುವುದು ಸರಿಯೇ ಎಂದು ಕೇಳೋಣ. ಇದನ್ನು ಅವರು ಒಪ್ಪಿಕೊಳ್ಳುತ್ತಾರೆಯೋ ಕೇಳೋಣ ನೀವು ಬನ್ನಿ ನಾನು ಬರುತ್ತೇನೆ. ಅವರು ಏನು ಹೇಳುತ್ತಾರೆ ಕೇಳೋಣ. ಇಲ್ಲಿ ಎಲ್ಲರೂ ಕೂಡ ಗ್ರಾಮಾಂತರ ಪ್ರದೇಶಗಳಿಂದ ಬಂದಂಥಾವರು ಆದುದರಿಂದ ನಾವೆಲ್ಲರೂ ಕೂಡ ಹಳ್ಳಿಯ ರೈತರ ಪರವಾಗಿ ಕೆಲಸ ಮಾಡಬೇಕೇ ಹೊರತು ರೈತರ ಬೆನ್ನು ಮುರಿಯುವಂತೆ ಕೆಲಸ ಮಾಡಬಾರದು, ಅವರ ರಕ್ತವನ್ನು ಹೀರತಕ್ಕಂಥ ಶೋಷಣೆಯ ಕೆಲಸ ಮಾಡಬಾರದು ಆದುದರಿಂದ ನಾನು ಇದನ್ನು ವಿರೋಧಿಸುತ್ತೇನೆ. ಗ್ರಾಮಾಂತರ ಪ್ರದೇಶದ ರಸ್ತೆ, ಮೋರಿ ವಗೈರ ಕೆಲಸಗಳನ್ನು ಮಾಡುವುದಕ್ಕೆ ಬೇರೆ ಹಣ ಸಂಗ್ರಹ

ಮಾಡುವುದಕ್ಕೆ ತಮಗೆ ಸಾಧ್ಯ ಇದೆ. ಶಕ್ತಿ ಇರುವವರ ಮೇಲೆ ಬೇರೆ ಯಾವುದಾದರೂ ಒಂದು ಟ್ಯಾಕ್ಸ್ ಹಾಕಿ ಆ ಮೂಲಕ ಹಣ ಸಂಗ್ರಹ ಮಾಡಿ ಗ್ರಾಮಾಂತರ ಪ್ರದೇಶದಲ್ಲಿ ರಸ್ತೆಗಳನ್ನು ಮಾಡಿಸಿಕೊಡಬೇಕು ಎಂದು ನಾನು ಕಳಕಳಿಯಿಂದ ತಮ್ಮನ್ನು ಪ್ರಾರ್ಥನೆ ಮಾಡಿಕೊಳುತ್ತೇನೆ ನಾನು ಮತ್ತೇ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಏನಂದರೆ ಈ ಮೊದಲು ಎರಡು ಬಿಲ್ಲುಗಳನ್ನು ಏನ್ನು ತಂದಿದ್ದಿರೋ ಅದನ್ನು ಸುಲಭವಾಗಿ ಪಾಸ್ ಮಾಡಿದೆವು. ಹಾಗೇಯೇ ಈ ಬಿಲ್ಲನ್ನು ಪಾಸ್ ಮಾಡಬೇಕೆಂದರೆ ಸಾಧ್ಯವಿಲ್ಲ. ದೊಡ್ಡ ದೊಡ್ಡ ಭಾಷಣ ಮಾಡತಕ್ಕಂಥ ಜನ ಈ ರೀತಿ ಮಾಡುತ್ತಾರೆ. ಆದಕೋಸ್ಕರ ಮಾನ್ಯ ಆಧ್ಯಕ್ಷರೇ ಈ ಬಗ್ಗೆ ಏನಾದರೂ ಮಾಡಿ. ಸರ್ಕಾರದವರು ಈ ಕೆಲಸವನ್ನು ಮಾಡುವ ಬದಲು ಇನ್ನಾವುದಾದರೂ ಬೇರೆ ತಂದು ಮಾಡಲಿ ಕೊನೇ ಪಕ್ಷ ಈ ಮನೆಯ ಆಡಳಿತ ಕಾಂಗ್ರೆಸ್ ಸದಸ್ಯರಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುವುದು ಇಷ್ಟೆ. ಈ ವಿಧೇಯಕ ಮಂಜೂರಾಗದೇ ಇದ ಹಾಗೆ ನೀವು ನಮ್ಮ ಕಡೆ ಓಟು ಮಾಡಬೇಕು ಎಂದು. ಇಲ್ಲದೇಹೋದರೆ ರುಜುವಾತಾಗುತ್ತದೆ, ತಾವು ಏನು ಮಾಡುತ್ತೀರಿ ಅನ್ನುವುದು ನಮಗೆ ಗೊತ್ತಾಗುತ್ತದೆ ಅಧ್ಯಕ್ಷರ ಮೂಲಕ ನಾನು ಮತ್ತೊಮ್ಮೆ ಆಡಳಿತ ಕಾಂಗ್ರೆಸ್ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈ ವಿಧೇಯಕವನ್ನು ಮಂಡನೆ ಮಾಡತಕ್ಕಂಥ ಸದ್ಬುದ್ಧಿ ಲೋಕೋಪಯೋಗಿ ಮಂತ್ರಿಗಳಿಗೆ ಏಕೆ ಬಂತೋ ಗೊತ್ತಿಲ್ಲ. ಈಗಲಾದರೂ ಕೂಡ ಶ್ರೀಮಾನ್ ಚೆನ್ನಬಸಪ್ಪನವರಿಗೆ ದೇವರಲ್ಲಿ ನಂಬಿಕೆ ಇದ್ದರೆ ಈ ಬಗ್ಗೆ ಸದ್ಬುದ್ಧಿ ಕೊಡಲಿ ಎಂದು ದೇವರನ್ನು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ ದೇವೇಗೌಡ —ಇದರ ಬಗ್ಗೆ ಇಲ್ಲ ಒಂದು ಸಲಹೆ ಕೊಡಲು ಇಷ್ಟಪಡುತ್ತೇನೆ. ಈ ಬಿಲ್ಲನ್ನು ತಂದಿರುವ ೧ ಇದರ ಉದ್ದೇಶದ ಬಗ್ಗೆ ಯಾವುದೇ ತರಹದ ತಪ್ಪು ಭಾವನೆ ಕೊಡಲಿಕ್ಕೆ ಹೋಗುವುದಿಲ್ಲ. ಸಂಬಂಧಪಟ್ಟ ಮಂತ್ರಿಗಳು ಇದನ್ನು ಒಳ್ಳೆಯ ಉದ್ದೇಶದಿಂದ ತಂದಿದ್ದಾರೆ ಎಂದು ಹೇಳಿದರು ಆದರೆ ಇದರ ಬಗ್ಗೆ ಸರಿಯಾದ ನೀತಿ ಇಲ್ಲ. ಇದರಲಿ ಯಾವುದೋ ಒಂದು ತತ್ವಕ್ಕೆ ಅಂಟಿಕೊಂಡು ಹೇಳುತ್ತಿದ್ದಾರೆಂದು ಕಾಣುತ್ತೆ. ಗ್ರಾಮಾಂತರ ಪ್ರದೇಶಗಳಿಗೆ ಒಂದು ರಸ್ತೆ ಮಾಡಲು ಅವರೇ ಒಂದು ಪ್ರತ್ಯೇಕವಾದ ಫಂಡು ಮಾಡಿಕೊಂಡು ರಸ್ತೆ ಕೆಲಸ ಮಾಡಬೇಕೆಂದು ಹೇಳಿದರೆ ಇದು ಸರಿಯಾದದ್ದಲ್ಲ. ನಾವು ಈಗಾಗಲೇ ಸರಕಾರಕ್ಕೆ ತೆರಿಗೆ ಹಾಕಲು ಅವಕಾಶ ಕೊಟ್ಟಿರುವುದರಿಂದ ಸುಮಾರು ಹದಿನಾಲ್ಕೂವರೆ ಕೋಟಿ ರೂಪಾಯಿಗಳಷ್ಟು ತೆರಿಗೆ ಬರುತ್ತೆ ಮತ್ತು ಇದರ ಮೇಲೆ ಬೇರೆ ರೀತಿಯಲ್ಲಿ ಎರಡು ಮೂರು ಕೋಟಿ ಬರುತ್ತೆ ವಾಹನಗಳ ತೆರಿಗೆ ಹೆಚ್ಚು ಮಾಡಿರುವುದರಿಂದ ಇದರಲ್ಲಿ ಒಂದು ಐದು ಕೋಟಿ ಬರುತ್ತೆ. ಇದರ ಜೊತೆಗೆ ಮಾರ್ಕೆಟ್ಟು ಫೀಸು ಒಂದು ಬೇರೆ ಹಾಕಬೇಕೆಂದರೆ, ಈಗಾಗಲೇ ಶೇಕಡ ಒಂದರಷ್ಟು ತೆರಿಗೆ ಇದೆ ಇದರ ಮೇಲೆ ಟ್ರೇಡರುಗಳ ಮೇಲೆ ಏಕೆ ತೆರಿಗೆ ಹಾಕ ಬೇಕೆಂದು ಹೋಗುತ್ತೀರಿ? ರೊಡಸ್ಸು ಮಾಡಿ ಇದರಲ್ಲಿ ಎರಡು ಪರ್ಸೆಂಟ್ ಬರಬಹುದು. ರಸ್ತೆ ಕೆಲಸಗಳು ಮಾಡಲು ಅಡ್ಡಿಯಾಗಿದೆ ಇದಕ್ಕೆ ಬೇರೆ ಸೆಸ್ ಹಾಕಿ ಎರಡು ಮೂರು ಕೋಟಿಯಷ್ಟು ಬರುತ್ತೆ ಎಂದು ಹೇಳುತ್ತಾರೆ. ಸರಕಾರಕ್ಕೆ ನಾವು ಇಲ್ಲಿ ಸುಮಾರು ೪೩೦ ಕೋಟಿ ಹಣ ಒದಗಿಸಿಲ್ಲವೇ? ಇದರಲ್ಲಿ ರಸ್ತೆ ಕೆಲಸಗಳನ್ನು ಮಾಡಲು ಆಗುವುದೇ ಇಲ್ಲವೇ? ಸರಕಾರಕ್ಕೆ ಕೊಡುವ ಹಣ ಎಲ್ಲಿಗೆ ಹೋಗುತ್ತದೆ? ಯಾವ ರೀತಿ ಇದನ್ನು ಖರ್ಚು ಮಾಡುತ್ತಾರೆ ಎನ್ನುವುದೇ ಗೊತ್ತಾಗುತ್ತಿಲ್ಲ. ಇದಕ್ಕಾಗಿ ಮತ್ತೆ ಜನರ ಮೇಲೆ ತೆರಿಗೆ ಹಾಕಿ ಸರಕಾರ ನಡೆಸಬೇಕು ಎಂದರೆ ಹೇಗೆ? ಈ ರೀತಿ ಮಾಡಿದರೆ ಸರಕಾರ ನಡೆಸುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ ಎಂದು ಹೇಳಬೇಕಾಗುತ್ತವೆ. ಸೇಂದಿ ಬಾಬಿನಿಂದ ಸುಮಾರು ೨೦ ಕೋಟಿ ರೂಪಾಯಿಗಳ ಮೇಲೆ ಬರುತ್ತದೆ. ಇದಲ್ಲದ್ದೆ ಸೇಲ್ಸ್ ಟ್ಯಾಕ್ಸ್‌ನಿಂದ ಸುಮಾರು ೩೦ ಕೋಟಿ ರೂಪಾಯಿ ಬರುತ್ತೆ. ಇಷ್ಟೆಲ್ಲಾ ಹಣ ಸರಕಾರಕ್ಕೆ ಬರುವುದು ಎಲ್ಲಿಗೆ ಹೋಗುತ್ತದೆ ಎನ್ನುವುದು ನಮಗಂತೂ ತಿಳಿಯುತ್ತಿಲ್ಲ. ಇದಲ್ಲದೆ ಹೇಮಾವತಿ ಯೋಜನೆ ತುಂಗಭದ್ರಾ ಯೋಜನೆ ಮತ್ತು ಕಾಳಿ ಯೋಜನೆ ಇವೆಲ್ಲಾ ಮಲಗಿ ನಿದ್ರೆ ಮಾಡುತ್ತಿವೆ. ಇಷ್ಟೆಲ್ಲಾ ಹಣ ಕೊಟ್ಟರೂ ಕೂಡ ಇವೆಲ್ಲ ಟ್ರಷರಿಯಿಂದಲೇ ಮಾಯವಾಗುತ್ತದೆಯೋ ಹೇಗೋ? ಗೊತ್ತಾಗುತ್ತಿಲ್ಲ. ಆದರೆ ಒಂದನ್ನು ಚೆನ್ನಾಗಿ ಸರಕಾರ ಕಲಿತಿದೆ ಅದು ಕಾನೂನು ಚೌಕಟ್ಟಿನೊಳಗೇನೇ ಹಣವನ್ನು ಮಾಯ ಮಾಡುವ ಮಂತ್ರವನ್ನು ಚೆನ್ನಾಗಿ ಕಲಿತಿದ್ದಾರೆ. ಆದುದರಿಂದ ಇಲ್ಲಿ ತಂದಿರುವ ಬಿಲ್ಲನ್ನು ಈಗ ಪಾಸು ಮಾಡುವುದು ಬೇಡ 'ಮತ್ತೆ ಜೂನ್ ತಿಂಗಳಲ್ಲಿ ನಾವು ಸೇರುವುದರಿಂದ ಆಗ ಸಿಕ್ಕಿಂ ಬಿಲ್ಲು ಬರುತ್ತೆ. ಆಗ ನಿಧಾನವಾಗಿ ಯೋಚನೆ ಮಾಡಿ ತರೋಣ ಇದರ ಬಗ್ಗೆ ಅವಸರ ಮಾಡಬೇಡಿ. ಟ್ರೇಡರುಗಳ ಮೇಲೆ ಶೇಕಡಾ ಒಂದರಷ್ಟು ಹೆಚ್ಚು ಮಾಡಿದರೆ ಅದು ಕೊಳ್ಳುವವರ ಮೇಲೆ ಬೀಳುತ್ತೆ. ಅವರು ಕೈಯಿಂದ ಏನೂ ಕೊಡುವುದಿಲ್ಲ. ಇದನ್ನು ವ್ಯಾಪಾರ ಮಾಡುವವರು ಚೆನ್ನಾಗಿ ಕಲಿತಿದ್ದಾರೆ. ಆದ್ದರಿಂದ ಈಗ ಇದನ್ನು ತರುವುದು ಬೇಡ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪುಟ್ಟಸ್ವಾಮಿ (ಚಾಮುಂಡೇಶ್ವರಿ).— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸಭೆಯ ಮುಂದೆ ಮಂಡನೆ ಮಾಡಿರತಕ್ಕ ಮಸೂದೆ ವಿಚಾರದಲ್ಲಿ ಎಷ್ಟು ವೇಗವಾಗಿ ಬಿಲ್ಲನ್ನು ತರಬೇಕೆಂದು ಹೇಳುತ್ತಿದ್ದಾರೋ ಅಷ್ಟೆ ವೇಗದಿಂದ ಇತರ ಪದಾರ್ಥಗಳ ಬೆಲೆಗಳೂ ಏರುತ್ತಿವೆ ಎಂದು ಇಲ್ಲಿ ತಿಳಿಸು ವುದಕ್ಕೆ ಅಪೇಕ್ಷೆಪಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಸೆಲ್ಲರ್ ಮೇಲೆ ತೆರಿಗೆ ಹಾಕಿದರೆ ಅದು ಬೈಯರ್ ಮೇಲೆನೇ ಹೋಗುತ್ತದೆ ಎಂದು ಹೇಳಿದರು. ಇದು ಹೇಗಿದೆ ಎಂದರೆ ಅಳಿಯ ಎನ್ನುವು ಹೆಸರಲ್ಲ ಮಗಳ ಗಂಡ ಎಂದು ಬೇರೆ ಹೆಸರಿನಲ್ಲಿ ಹೇಳಿದಂತಾಯಿತು ಅಷ್ಟೇ. ಮಾರ್ಕೆಟ್ಟು ಕಮಿಟಿಗಳನ್ನು ಎಲ್ಲ ಕಡೆಗಳಲ್ಲೂ ಏರ್ಪಾಡು ಮಾಡತಕ್ಕ ಕಾಲದಲ್ಲಿ ಇದರ ವ್ಯವಸ್ಥೆ ಯಾವ ರೀತಿಯಾಗಿರಬೇಕು ಎನ್ನು ವುದನ್ನು ಯೋಚನೆ ಮಾಡುವಾಗ ೧೯೫೭ಕ್ಕೆ ಮುಂಚೆ ಲೆಜಿಸ್ಲೇಟೀವ್ ಕೌನ್ಸಿಲ್ ಸದಸ್ಯರುಗಳು ಉತ್ತರ ದೇಶದ ಪಂಜಾಬು ಮತ್ತಿತರ ರಾಜ್ಯಗಳಲ್ಲಿ ಪ್ರವಾಸ ಮಾಡಿ ಅಲ್ಲಿರುವ ಮಾರ್ಕೆಟ್ಟು ಕಮಿಟಿಗಳನ್ನು ನೋಡಿಕೊಂಡು ಬಂದು ರೈತರಿಗೆ ಯಾವ ರೀತಿ ಲಾಭ ದೊರೆಯುತ್ತದೆ ಮತ್ತು ಇದರಿಂದ ರೈತರಿಗೆ ಆಗುತ್ತಿರುವ ಶೋಷಣೆಯನ್ನು ಎಷ್ಟರಮಟ್ಟಿಗೆ ತಪ್ಪಿಸಬಹುದು ಎನ್ನುವ ವಿಚಾರಗಳನ್ನು ತಿಳಿದು ಕೊಂಡು ಬಂದು ಕಾನೂನು ಮಾಡಿದರು. ಇದು ಕೆಲವು ಕಾಲ ಹಾಗೆ ನಡೆದುಕೊಂಡು ಬಂತು. ಮತ್ತೆ ೧೯೬೬ ರಲ್ಲಿ ನಾನು ಸಹಕಾರ ಖಾತೆ ಮಂತ್ರಿಯಾದಾಗ ರಾಜ್ಯದ ಎಲ್ಲ ಕಡೆಗಳಲ್ಲೂ ಮಾರ್ಕೆಟ್ಟು ಕಮಿಟಿ ಗಳನ್ನು ಮಾಡಬೇಕೆಂದು ಇದೇ ಸದನದಲ್ಲಿ ಒಪ್ಪಿ ಆದರಂತೆ ರಾಜ್ಯದಲ್ಲಿ ಒಂದು ಶಾಸನವೂ ಬಂದು ಅದು ಇಲ್ಲಿ ಅಂಗೀಕರಿಸಲ್ಪಟ್ಟಿತು.

4–30 P.M

ಮಾರ್ಕೆಟಿಂಗ್ ಕಮಿಟಿ ರಾಜ್ಯದ ಎಲ್ಲ ಭಾಗಗಳಿಗೂ ಅನ್ವಯವಾಗುವಂತೆ ಶಾಸನವನ್ನು ರಚಿಸ ಲಾಗಿದ್ದು ಇದರ ಸಾಧಕಭಾದಕಗಳು ಏನು ಇವೆ ಎನ್ನುವುದನ್ನು ಸ್ವಲ್ಪ ಮಾನ್ಯ ಸಚಿವರು ಸಮಾಧಾನ ವಾಗಿ ಪರಿಶೀಲನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅಧ್ಯಕ್ಷರೆ ೧೯೬೫ ನೇ ಇಸವಿಯಲ್ಲಿ ರಾಜ್ಯದ ಮಾರ್ಕೆಟಿಂಗ್ ಸಮಿತಿ ಶಾಸನಮಾಡಿದ್ದನ್ನ ಜಾರಿಗೆ ಕೊಡುವುದು ಸ್ವಲ್ಪ ನಿಧಾನ ಮಾಡಿದರು. ಅಂದರೆ ೧೯೬೬ರಲ್ಲಿ ಕಾನೂನು ಆದರೂ ಕೂಡ ಅದನ್ನು ಜಾರಿಗೆ ಕೊಡಬೇಕಾದರೆ ೧೯೬೮ನೇ ಇಸವಿ ಆಯಿತು. ನಾನು ಶ್ರೀಮಾನ್ ಚನ್ನಬಸಪ್ಪನವರ ಸ್ಮೃತಿಪಟಲಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಶಾಸನದ ಪ್ರಕಾರ ಮಾರ್ಕೆಟಿಂಗ್ ವ್ಯವಸ್ಥೆ ಆಯಿತು ಮಾರುಕಟ್ಟೆಯಲ್ಲಿ ಮಾರಾಟ ವಾಗಿರುವರ ವ್ಯವಸಾಯೋತ್ಪನ್ನ ವಸ್ತುಗಳ ಮೇಲೆ ಗರಿಷ್ಟ ಸುಂಕ ಮ್ಯಾಕ್ಸಿಮಮ್ ಸೆಸ್ ಇದ್ದದ್ದು ೩೦ ಪೈಸೆ. ಶ್ರೀಮಾನ್ ಚನ್ನಬಸಪ್ಪನವರು, ಲೋಕಸಭೆಯ ಸದಸ್ಯರಾದಂತ ಶ್ರೀಮಾನ್ ಹನುಮಂತಯ್ಯ ನವರಿಗೂ ನನಗೂ ಚನ್ನಪಟ್ಟಣದ ಒಂದು ಗ್ರಾಮದಲ್ಲಿ ಬೇಟಿಯಾಯಿತು. ಆಗ ಅವರು ಕರೆದು ಕೇಳಿ ದರು, ಏನು ಪುಟ್ಟಸ್ವಾಮಿಯವರೆ ನೀವು ರೈತರ ಪ್ರತಿನಿಧಿಯಾಗಿ ೧೦೦ ರೂಪಾಯಿಗಳ ವ್ಯವಸಾಯೋತ್ಪನ್ನ ವಸ್ತುಗಳನ್ನು ತಂದರೆ ಅದರ ಮೇಲೆ ೩೦ ಪೈಸೆ ಸೆಸ್ ಹಾಕುವುದು ಎಂದರೆ ನೀವು ಹೇಗೆ ಒಪ್ಪಿ ಕೊಂಡಿರಿ ಎಂದು ಕೇಳಿದರು. ನಾನು ಹೇಳಿದೆ ೩೦ ಪೈಸೆ ಗರಿಷ್ಟ ಮಿತಿ ಏನು ಇದೆ ಅದಕಿಂತ ಕಮ್ಮಿ ಕೂಡ ಹಾಕಬಹುದು. ಆಯಾಯ ಮಾರ್ಕೆಟಿಂಗ್ ಸೊಸೈಟಿಗಳ ಸ್ಥಿತಿಗಗತಿಳನ್ನು ಅನುಸರಿಸಿಕೊಂಡು, ಅಲ್ಲಿರ ತಕ್ಕ ಹಣಕಾಸಿನ ಪರಿಸ್ಥಿತಿಯನ್ನು ಅನುಸರಿಸಿಕೊಂಡು ೩೦ ಪೈಸೆಗಿಂತ ಕಡಿಮೆ ಹಾಕುವುದಕ್ಕೂ ಅವಕಾಶ ವಿದೆ ಎಂದು ಹೇಳಿದೆ. ಮೈಸೂರಿನಲ್ಲಿ ೨೦ ಪೈಸೆ ಹಾಕಿದೆ ಎಂದು ಹೇಳಿದೆ. ಕಾಲ ಬದಲಾವಣೆ ಯಾಗಿವೆ, ರೂಪಾಯಿನ ಬೆಲೆ ಕಡಿಮೆಯಾಗಿದೆ. ರೈತನು ಏನು ಈವತ್ತು ವ್ಯವಸಾಯೋತ್ಪನ್ನ ವಸ್ತುಗಳನ್ನು ತರುತ್ತಿದ್ದಾರೆ ಅದಕ್ಕೆ ಹೆಚ್ಚಿನ ಬೆಲೆಯನ್ನು ಕೊಟ್ಟು ತರುತ್ತಿದ್ದಾರೆ ಎಂದು ಹೇಳಿದೆ. ಆದಕಾರಣ ಇದ ನ್ನೆಲ್ಲಾ ಪರಿಶೀಲನೆ ಮಾಡಬೇಕು. ಈವತ್ತಿಗೂ ಕೂಡ ಯಾವುದೇ ಒಂದು ವಸ್ತುವಿನ ಬೆಲೆ ಮೌಲ್ಯ ಕಾಯಂ ಆಗಿ ಇರುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅನೇಕ ವೇಳೆ ನಾನು ಅಂಗಡಿಗಳಿಗೆ ಸಾಮಾನು ತರುವುದಕ್ಕೆ ಹೋದರೆ ಸಾಮಾನು ತರದೆ ವಾಪಸ್ ಬಂದ ಸಂದರ್ಭಗಳು ಉಂಟು. ನನ್ನ ಮಕ್ಕಳು ಕೇಳುತ್ತಾರೆ. ಏತಕ್ಕೆ ತರಲಿಲ್ಲ ಎಂದು ಕೇಳುತ್ತಾರೆ. ೧೦ ರೂಪಾಯಿನದಕ್ಕೆ ೨೦ ರೂಪಾಯಿ ಗಳು, ಆಗುತ್ತದೆ. ನಮಗೆ ಅಷ್ಟೊಂದು ಕೊಟ್ಟು ತರುವುದಕ್ಕೆ ಮನಸ್ಸು ಬರುವುದಿಲ್ಲ. ಮಕ್ಕಳು ಹೇಳು ತ್ತಾರೆ ನಮ್ಮ ಕಾಲದಲ್ಲ ನಮ್ಮ ಕೈಲಿ ದುಡ್ಡು ಕೊಡಿ ಸಾಮಾನು ತರುತ್ತೇವೆಂದು ಹೇಳುತ್ತಾರೆ. ರೂಪಾಯಿನ ಬೆಲೆ ಇಳಿದಿದೆ ಅದಕ್ಕಿಂತ ಕಮ್ಮಿ ಬೆಲೆಗೆ ಸಿಗುವುದಿಲ್ಲವೆಂದು ಗೊತ್ತಿದರೂ ಕೂಡ ೧೦ ರೂಪಾಯಿನದಕ್ಕೆ ೫೦ ರೂಪಾಯಿ ಕೊಟ್ಟು ಕೊಂಡು ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಕಾಲಬದಲಾ ವಣೆಯಾಗಿದೆ. ಒಂದು ವರ್ಷ ಎರಡು ವರ್ಷದಲ್ಲಿ ಎಷ್ಟರಮಟ್ಟಿಗೆ ಆಗಿದೆ ಎಂಬುದು ಸಭೆಗೂ ಗೊತ್ತಿದೆ. ಕಾನೂನಿನಲ್ಲಿ ೩೦ ಪೈಸೆ ಬದಲು ಒಂದು ರೂಪಾಯಿ ಆಗಿರುವುದನ್ನು ಒಪ್ಪಿಕೊಳ್ಳಲೇಬೇಕು. ಅದು ಗರಿಷ್ಟ ಸೆಸ್ ೧ ರೂಪಾಯಿಗೆ ಮೀರಕೂಡದು. ಆದರೆ ಈವತ್ತು ನಾವು ಮತ್ತೊಂದು ಸೆಸ್ಸನ್ನು ಜಾರಿಗೆ ತರತಕ್ಕಂಥ ದು ಅಧಿಕಾರಿಗಳಿಗೆ ನಾವು ಯಾವ ದೃಷ್ಟಿಯಿಂದ ಮಾಡಿರುತ್ತೇವೆ ಎನ್ನುವುದನ್ನು ತಿಳಿದು ಅದನ್ನು

ಆಚರಣೆಗೆ ತರುವುದಕ್ಕೂ ಕೂಡ ಬಹಳ ವಿಶಾದದಿಂದ ಹೇಳಬೇಕಾಗಿದೆ. ತಾವು ಮಾರ್ಕೆಟಿಂಗ್ ಆಫೀಸರಿಂದ ಚೀಫ್ ಮಾರ್ಕೆಟಿಂಗ್ ಆಫೀಸರ್, ಕಚೇರಿಯಿಂದ ಮಾರ್ಕೆಟಿಂಗ್ ಸಮಿತಿಯವರೆಗೂ ಗೊತ್ತಿರುವಂತೆ ವಿಷಯಗಳನ್ನು ಸಭೆಯ ಮುಂದಿಟ್ಟಿರಬಹುದು. ಗರಿಷ್ಟ ಮಿತಿ 1 ರೂಪಾಯಿ ಹಾಕಬೇಕೆಂದು ಒತ್ತಾಯ ಮಾಡಿದಂದು ನಿದರ್ಶನವಿದೆ. ಕಾರಣ ವರ್ಲ್ಡ್ ಬ್ಯಾಂಕ್ ಲೋನ್ ಸಿಗುತ್ತದೆ. ವರ್ಲ್ಡ್ ಬ್ಯಾಂಕ್ ಲೋನ್ ಸಿಗಬೇಕಾದರೆ ನಾವು ಒಂದು ರೂಪಾಯಿ ತೆರಿಗೆಯನ್ನು ಹಾಕಬೇಕು ಎಂದು ಒಪ್ಪಿಕೊಂಡಿದ್ದೇವೆ ಆದುದರಿಂದ ನಮ್ಮ ಮಾರ್ಕೆಟಿಂಗ್ ಸಂಸ್ಥೆ ೮ ಆಣೆ ಯಾಗಲಿ ೬೦ ಪೈಸೆಯಾಗಲಿ ಹಾಕುವುದಕ್ಕೆ ಸ್ವಾತಂತ್ರವಿಲ್ಲ ವಿಧಾನ ಸಭೆಯಲ್ಲೂ ಕೂಡ ಒಂದು ರೂಪಾಯಿಗೆ ವಿರೋಧದಂದೆ ತೆರಿಗೆಯನ್ನು ಹಾಕಿದ ನಿದರ್ಶನ ಕೂಡ ಇದೆ. ಇದ್ದು ಕೆಲವು ಮಾರ್ಕೆಟಿಂಗ್ ಸಂಸ್ಥೆಗಳು ತಮಗೆ ಬೇಕಾದಾಗ ವರ್ಲ್ಡ್ ಬ್ಯಾಂಕಿನಿಂದ ಸಾಲ ತರಿಸುತ್ತಾವೆ. ನಮ್ಮಲ್ಲಿ ಸಾಕಷ್ಟು ಉತ್ಪತ್ತಿ ಇದೆ. ನಾವು 50 ಪೈಸೆ ಹಾಕುತ್ತೇವೆ ಎಂದರೂ ಕೂಡ ಒಂದು ರೂಪಾಯಿ ಹಾಕಬೇಕು ಎಂದು ಇದೆ. ಶ್ರೀಮಾನ್ ಚನ್ನಬಸಪ್ಪನವರು ತಮ್ಮ ಗ್ರಾಮಾಂತರ ಜನರ ಮೇಲೆ ಸಹಾನುಭೂತಿಯಿಂದ ರಸ್ತೆಗಳನ್ನು ಒದಗಿಸಿಕೊಡುವ ಮಹಾ ಉದ್ದೇಶಕ್ಕಾಗಿ ಅವರೆ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಇದು ನನಗೆ ಬಹಳ ಸಂತೋಷವನ್ನು ವುಂಟುಮಾಡಿದೆ. ರಾಜ್ಯ ಸರ್ಕಾರದ ಹಿರಿಯ ಸದಸ್ಯರು ಬಹುಶಹ ರೈತರ ವಿಷಯದಲ್ಲಿ ಅವರಷ್ಟು ಕಳಕಳಿಯನ್ನು ವ್ಯಕ್ತಪಡಿಸುವವರನ್ನು ನಾನು ನೋಡಿಲ್ಲ. ರೈತರ ಕಷ್ಟಗಳನ್ನು ಸ್ವತಃ ಅನುಭವಿಸಿದಂತವರನ್ನು ನಾನು ನೋಡಿಲ್ಲ ರೈತರ ಕಷ್ಟ ಏನು ಎನ್ನುವುದನ್ನು ಸ್ವತಃ ಅನುಭವಿಸಿದ ನಾನು ಹೇಳಿಕೊಳ್ಳುವುದಕ್ಕೆ ಶಕ್ತಿ ಇಲ್ಲ ಶಾಸನ ಮಾಡುವುದೇ ಒಂದು ಜಾರಿಗೆ ಕೊಡುವುದೇ ಒಂದು ಆಗಬಾರದು. ಅಧ್ಯಕ್ಷರೆ, ರೈತ ದೇವರಿಗೆ ಕೈ ಮುಗಿದು ಊರಮಾರಮ್ಮನಿಗೆ ಕೈಮುಗಿದು ಮಾರಾಟ ಮಾಡುವುದಕ್ಕೆ ಮುಂದೆ ಹೋದರೆ ಅಲ್ಲಿಂದ ಸುಲಿಗೆ ಪ್ರಯತ್ನ ನಡೆಯುತ್ತದೆ ಶೇಕಡಾ ಒಂದೂವರೆ ರೂಪಾಯಿ ಕಮಿಷನ್ ಕೊಡಬೇಕಾಗುತ್ತದೆ ಅದು ಒಂದೂವರೆ ರೂಪಾಯಿ ಆದರೂ ಆಗಿರಬಹುದು ಅಥವಾ ಎರಡೂವರೆ ರೂಪಾಯಾದರೂ ವಸೂಲು ಮಾಡಬಹುದು ಅವರ ಮೇಲೆ ನನಗೆ ತಿಳಿದಮಟ್ಟಿಗೆ ಯಾವ ಹತೋಟಿಯೂ ಕೂಡ ಇಲ್ಲ ಆಚರಣೆಯಲ್ಲಿ ಮಾರ್ಕೆಟಿಂಗ್ ಇಲಾಖೆಯವರು ಯಾವ ಒಂದು ಶಾಸನವನ್ನು ಮಾಡಿದ್ದಾರೆ ಅದು ಜಾರಿಗೆ ಬರುವಂತೆ ಮಾಡಬೇಕಾದುದು ಅವರ ಜವಾಬ್ದಾರಿಯಲ್ಲವೆ. ಅಷ್ಟಿಗೆ ಮುಗಿಯಲಿಲ್ಲ. ಅವನ ಗೋಳು. ಅಲ್ಲಿ ಹೋದ ಮೇಲೆ ಬೊಗಸೆ ತೆಗೆದು ಹಾಕುತ್ತಾನೆ. ಅದು ಎಷ್ಟಾದರೂ ಆಗಬಹುದು. ಆಮೇಲೆ ಅಲ್ಲಿ ತೂಕ ಮಾಡಿಕೊಡಬೇಕಾದಾಗ 10 ಪೈಸೆಯಂತೆ ಒಂದು ಮೂಟೆಗೆ ಕೊಡಬೇಕು. ಅಲ್ಲಿಗೆ ಮುಗಿಯಲಿಲ್ಲ, ಮತ್ತೆ ಇನ್ನು ತೂಕದಲ್ಲಿ.......

ಶ್ರೀ ಹೆಚ್. ಡಿ. ದೇವೇಗೌಡ.— ಆಲೂಗೆಡ್ಡೆ ಬೇರೆ ತೂಕಮಾಡುತ್ತಾರೆ. ಪಕ್ಕದಲ್ಲಿ ಒಂದು ಬಲವಾದ ಗಡ್ಡೆಯನ್ನು ಇಟ್ಟುಕೊಳ್ಳುತ್ತಾರೆ. ಅದರ ಲೆಕ್ಕ ಅದರಲ್ಲಿ ತೆಗೆಯಬೇಕು ಶ್ರಿಂಕೇಜ್ ಬರುತ್ತದೆಂದು ಮೂಟೆಗೆ ಸುಮಾರು ಒಂದು ದಡಿಯಷ್ಟು ಹೋಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಯ್ಯ.— ರೈತರು ಚಕ್ಕಡಿಗೆ ಸಾಮಾನುಗಳನ್ನು ತೆಗೆದುಕೊಂಡು ಹೋಗುವುದು ಮತ್ತೆ ತರುವುದು ಅಷ್ಟಿಯೂ ದುಡ್ಡನ್ನು ತರಬೇಕಾಗುತ್ತದೆ. ಹೀಗೆ ಎಷ್ಟೋ ಕೊಡುವುದು ಇರುತ್ತದೆ. ಇಷ್ಟೆಲ್ಲ ಮಾರ್ಕೆಟಿಂಗ್ ಸಮಿತಿಯ ಶಾಸನದ ಪ್ರಕಾರ ಮಾರಾಟ ಮಾಡಬೇಕಾದರೆ ತೆರಿಗೆಗಳನ್ನು ಕೊಡಬೇಕಾಗುತ್ತದೆ. ಒಂದು ಪಕ್ಷ ಮನೆಯಲ್ಲಿ ಮಾರಾಟ ಮಾಡುತ್ತೇನೆಂದರೆ ಕೊಂಡುಕೊಂಡು ಹೋಗುವವರು ಇದೆಲ್ಲವನ್ನೂ ವಸೂಲು ಮಾಡುತ್ತಾರೆ. ಇದರಿಂದ ಏನಾಗಿದೆ ಎಂದರೆ ಭ್ರಷ್ಟಾಚಾರಕ್ಕೆ ಅವಕಾಶವಾಗುತ್ತದೆ ಒಂದು ಲಾರಿ ಬತ್ತವನ್ನು ವ್ಯಾಪಾರಕ್ಕಾಗಿ ಕೊಂಡು ಕೊಂಡು ಹೋಗಬೇಕಾದರೆ ಮಾರ್ಕೆಟಿಂಗ್ ಸೊಸೈಟಿಯ ಸಿಬ್ಬಂದಿಯವರು ತೆರಿಗೆಯನ್ನು ಕೊಟ್ಟಿಲ್ಲವೆಂದು ವಸೂಲು ಮಾಡುತ್ತಾರೆ. ಇದರಿಂದ ಮಾರ್ಕೆಟಿಂಗ್ ಕಮಿಟಿಗೆ ಬರತಕ್ಕ ಭಾಗ ಸಾಕಷ್ಟು ಪ್ರಮಾಣದಲ್ಲಿ ಬರುವುದಿಲ್ಲ. ಯಾವ ಉದ್ದೇಶದಿಂದ ಈ ಮಾರ್ಕೆಟಿಂಗ್ ಸಂಸ್ಥೆಗಳನ್ನು ಮಾಡಿದ್ದೇವೆಯೋ ಆ ಉದ್ದೇಶ ನೆರವೇರುತ್ತಾ ಇಲ್ಲ. ಇದರ ಜೊತೆಗೆ ಇವತ್ತು ರಸ್ತೆ ಮಾಡುವುದಕ್ಕೆ ಶೇಕಡಾ ಒಂದು ಭಾಗಕ್ಕೆ 1 ರೂಪಾಯಿ ತೆರಿಗೆ ಹಾಕಬೇಕೆಂದು ಇದ್ದಾರೆ.

ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾದ ರಸ್ತೆಗಳು ಇಲ್ಲವಾದ್ದರಿಂದ, ಈಗ ಸರಿಯಾದ ರಸ್ತೆಗಳನ್ನು ಮಾಡಬೇಕಾದ ಅವಶ್ಯಕತೆ ಇದೆ, ಅದಕ್ಕೆ ನಾವೆಲ್ಲರೂ ಕೂಡ ಕಾಂಟ್ರಿಬ್ಯೂಟ್ ಮಾಡಬೇಕು ಅಲ್ಲಿದೇ ರೈತರು ಕೂಡ ಎಲ್ಲಾ ಕಾಂಟ್ರಿಬ್ಯೂಟ್ ಮಾಡಬೇಕು. ಆದರೆ ರೈತರು ಅಷ್ಟೇ ಜನ ಮಾತ್ರ ಈ ರಸ್ತೆಗಳ ಸೌಕರ್ಯವನ್ನು ಉಪಯೋಗಿಸಿಕೊಳ್ಳುತ್ತಾರೆಯೇ ಏನು ? ಇನ್ನು ಗ್ರಾಮಾಂತರಗಳಲ್ಲಿ ಇನ್ನು ಬೇರೆ ಯಾರೂ ಹೋಗುವುದಿಲ್ಲವೇನು ? ಆದುದರಿಂದ ಈ ಗ್ರಾಮಾಂತರ ಪ್ರದೇಶಗಳ ರಸ್ತೆಗೆ ರೈತರು ಒಬ್ಬರೇ ಹಣ ಕೊಡಬೇಕೆ ಎನ್ನುವುದನ್ನು ಆಲೋಚನೆ ಮಾಡಬೇಕು. ಆದರೆ ಎಷ್ಟು ಪ್ರಮಾಣದಲ್ಲಿ

ಆಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ಈಗ ಉದಾಹರಣೆಗೆ ಹೇಳುವುದಾದರೆ ಒಬ್ಬ ರೈತ ಒಂದು ಕ್ವಿಂಟಾಲ್ ಭತ್ತ ತೆಗೆದುಕೊಂಡು ಹೋದರೆ ಅವನಿಗೆ ೧೫೦ ರೂಪಾಯಿ ದೊರೆಯುತ್ತದೆ ಬಂದಂಥ ೧೫೦ ರೂಪಾಯಿ ಹಣದಲ್ಲಿ ಮಾರ್ಕೆಟಿಂಗ್ ಸೆಸ್ ಒಂದೂವರೆ ರೂಪಾಯಿ, ನಂತರ ದಳ್ಳಾಳಿಗಳ ಚಾರ್ಜು ಎರಡೂಕಾಲು ರೂಪಾಯಿ, ಒಟ್ಟು ಮೂರು ಮುಕ್ಕಾಲು ರೂಪಾಯಿ ಆಯಿತು. ನಂತರ ಅಲ್ಲಿ ತೂಕ ಮಾಡುವವರಿಗೆ ಸುಮಾರು ಎಂಟು ಆಣೆ ಕೊಡಬೇಕಾಗುತ್ತದೆ. ಅಲ್ಲಿಗೆ ಸುಮಾರು ನಾಲ್ಕು ಕಾಲು ರೂಪಾಯಿ ಆಗುತ್ತದೆ, ನಂತರ ಈಗ ರೋಡ್ ಸೆಸ್‌ಗೆ ಎರಡು ರೂಪಾಯಿ ಅಥವಾ ಎರಡೂವರೆ ರೂಪಾಯಿ ಅಂದರೆ ಅಲ್ಲಿಗೆ ಒಟ್ಟು ಆರು ರೂಪಾಯಿ ಮೇಲೆ ಬೀಳುತ್ತದೆ. ಈಗ ಒಬ್ಬ ರೈತ ಒಂದೇ ಒಂದು ಕ್ವಿಂಟಾಲ್ ಭತ್ತವನ್ನು ತಾನು ಬೆಳೆದು ತೆಗೆದುಕೊಂಡು ಹೋಗಿ ಮಾರಾಟ ಮಾಡಬೇಕಾದರೆ ಆರು ರೂಪಾಯಿವರೆಗೆ ಒಟ್ಟು ಕೊಡಬೇಕಾಗುತ್ತದೆ. ಅದರಲ್ಲಿ ಆಗತಕ್ಕ ಅಕ್ಕಿ ಶೇಕಡಾ ೬೬ ಕೆ. ಜಿ. ಆಗ ಅವನು ೬೬ ಕೆ. ಜಿ. ಅಕ್ಕಿಗೆ ೬ ರೂಪಾಯಿ ಸೆಸ್ ಕೊಡಬೇಕಾಗುತ್ತದೆ. ಇದು ನಾವು ಬೆಲೆಯನ್ನು ಹತೋಟಿಗೆ ತರತಕ್ಕ ಪ್ರಯತ್ನವೇ ? ಇದರ ಬಗ್ಗೆ ಆಲೋಚನೆ ಮಾಡಬೇಕು ಎಂದು ನನ್ನ ಸಲಹೆ ತಾವು ಆಲೋಚನೆ ಮಾಡಿ ಇದು ಸರಿಯಾದುದು ಹಾಕಲೇಬೇಕು ಎಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ ನನ್ನ ಅಭಿಪ್ರಾಯದಲ್ಲಿ ಇದು ಒಂದು ರೈತರಿಗೆ ಹೊರೆಯಾಗುತ್ತವೆ ಎಂದು ಹೇಳುತ್ತೇನೆ. ಹಾಗೆ ಮಾಡಬೇಡಿ. ಇದು ವ್ಯಾಪಾರಸ್ಥರ ಮೇಲೆ ಬೀಳುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದು ಬಡವನ ಮೇಲೆ ಈ ಸೆಸ್ ಬೀಳುತ್ತದೆ. ಈಗ ರೈತನ ಮೇಲೆ ಸೆಸ್ ಬೀಳುವುದು ೧೦೦ ರೂಪಾಯಿಗೆ ಅವನು ಮಾರಾಟಮಾಡಿದರೆ ೬ ರೂಪಾಯಿವರೆಗೆ ಕಡಿಮೆಯಾಗುತ್ತದೆ. ಆಗ ರೈತರು ಅದನ್ನು ಒಪ್ಪಿಕೊಳ್ಳುವುದಿಲ್ಲ, ಅದನ್ನು ಆಕ್ಷೇಪಣೆ ಮಾಡುತ್ತಾರೆ. ೧೦೦ ರೂಪಾಯಿಗೆ ಇಷ್ಟು ತೆರಿಗೆ ಬೀಳುತ್ತದೆ ಎನ್ನುವುದನ್ನು ಮರೆಯಬಾರದು. ಇದು ಬೇರೆ ಬೇರೆ ರಾಜ್ಯಗಳಲ್ಲಿ ಏನು ಇದೆ ಅದನ್ನು ಯೋಚನೆ ಮಾಡಬೇಕು. ಈಗ ಯಾವ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳ ರಸ್ತೆಯನ್ನು ನಿರ್ಮಾಣ ಮಾಡುವುದಕ್ಕೆ, ರಸ್ತೆಯನ್ನು ಸರಿಯಾದ ರೀತಿಯಲ್ಲಿ ರಸ್ತೆ ರಿಪೇರಿ ಮಾಡಿ ಇಟ್ಟುಕೊಳ್ಳುವುದಕ್ಕೆ ಅದಕ್ಕೆ ಎಲ್ಲಿ ಕಂದಾಯ ಹಾಕಿದ್ದಾರೆ ಎನ್ನುವುದನ್ನು ಪರಿಶೀಲನೆ ಮಾಡಬೇಕು, ಇದು ಎಲ್ಲಾ ಪರಿಶೀಲನೆ ಮಾಡಬೇಕಾದರೆ, ನನಗಾದರೂ ಅನಿಸುತ್ತದೆ, ಇದು ಬಹಳ ಒಳ್ಳೆಯ ವಿಚಾರ, ಬಹಳ ಸಣ್ಣದು ಎಂದು ತಾತ್ಸಾರ ಮಾಡಬಾರದು. ಈಗ ಎಷ್ಟು ಕೋಟಿ ರೂಪಾಯಿ ವ್ಯವಸಾಯೋತ್ಪನ್ನಗಳ ಮಾರಾಟವಾಗುತ್ತಿದೆ, ಅದರ ಮೇಲೆ ಎಷ್ಟು ಹಣ ಬರುತ್ತದೆ ಎನ್ನುವುದನ್ನು ತಿಳಿಸಬೇಕಾದ್ದು ಅಗತ್ಯ. ಇದು ಎಲ್ಲಾ ನೋಡಿದರೆ ಒಳ್ಳೆಯ ತತ್ವಗಳು ಇದರಲ್ಲಿ ಅಡಗಿದೆ ಇದನ್ನೆಲ್ಲಾ ಪರಿಶೀಲನೆಮಾಡಿ ಯಾವುದು ನ್ಯಾಯ ಎಂದು ತೀರ್ಮಾನ ಮಾಡುವುದು ಅತ್ಯಂತ ಅಗತ್ಯ ಇದೆ. ಆದುದರಿಂದ ಇದಕ್ಕೆ ಮಾನ್ಯ ಸಚಿವರು ಒಂದು ಚುನಾಯಿತ ಸಮಿತಿ. ಅಂದರೆ ಸೆಲೆಕ್ಟ್ ಕಮಿಟಿಮಾಡುವುದು ಯೋಗ್ಯ ಇದೆ ಎಂದು ನಾನು ಸೂಚನೆ ಮಾಡುತ್ತೇನೆ. ಆದರೆ ಸೂಚನೆ ಮಾಡುವಾಗ ಇದರ ಇಂಪ್ಲಿಕೇಷನ್ ಏನು ಎನ್ನುವುದು ನನ್ನ ಗಮನದಲ್ಲಿ ಇದೆ. ಯಾವ ಒಂದು ನೀತಿಯನ್ನು ಒಪ್ಪಿಕೊಂಡಿದ್ದಾರೆ ಸೆಲೆಕ್ಟ್ ಕಮಿಟಿಗೆ ಬಿಲ್ ರೆಫರ್ ಮಾಡುವಾಗ ಪ್ರಿನ್ಸಿಪಲ್ ಈಸ್ ಅಕ್‌ಸೆಪ್‌ಟೆಡ್ ಎಂದು ಹೇಳುತ್ತಾರೆ, ಅನುಮೋದನೆ ಇದೆ. ಈ ತರಹ ಸೆಲೆಕ್ಟ್ ಕಮಿಟಿಯಲ್ಲಿ ಎಷ್ಟೋ ನಿದರ್ಶನಗಳು ಇವೆ, ಸೆಲೆಕ್ಟ್ ಕಮಿಟಿಯಲ್ಲಿ ಇರತಕ್ಕ ಸಾಧಕ ಬಾಧಕಗಳನ್ನು ಸೂಚಿಸಿದಾಗ ಪುನಃ ಪರಿಶೀಲನೆ ಮಾಡಿದಂತಹ ನಿದರ್ಶನಗಳು ಎಷ್ಟೋ ಇದೆ, ನಾನಾದರೂ ಅತ್ಯಂತ ವಿನಯದಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇದು ರೈತನಿಗೆ ಸಂಬಂಧಪಟ್ಟ ಒಂದು ಮಸೂದೆ. ಈಗ ರೈತನ ಮೇಲೆ ಪ್ರತ್ಯೇಕವಾಗಿ, ಮತ್ತು ಪರೋಕ್ಷವಾಗಿ ಹಾಕಿದರು ತಿಳಿಯದಂತೆ ಎಷ್ಟೋ ತೆರಿಗೆಗಳು ಬೀಳುತ್ತವೆ. ಅದನ್ನು ಎಷ್ಟೋ ಪ್ರಮಾಣದಲ್ಲಿ ಹಾಕುತ್ತಿದ್ದಾರೆ ಈಗ ಮಾರ್ಕೆಟ್ಟಿನಲ್ಲಿ ಇರತಕ್ಕ ದೋಷ ಇವೆಲ್ಲಾ ಯಾವ ರೀತಿ ಸರಿಮಾಡಬೇಕು ಎನ್ನುವುದನ್ನು ಪರಿಶೀಲನೆ ಮಾಡುವುದು ಅತ್ಯಂತ ಅಗತ್ಯ ಇದೆ. ಈಗ ಈ ಮಸೂದೆ ಕೆಲವು ದಿನಗಳ ಹಿಂದೆ ಬಂದಿದೆ. ಹೆಚ್ಚಿನ ಕಾಲ ಇದ್ದಿದ್ದರೆ ರೈತರ ಪ್ರತಿನಿಧಿಗಳು ವಿಷಯ ವ್ಯಕ್ತಪಡಿಸುವುದಕ್ಕೆ ಅವಕಾಶವಾಗುತ್ತಿತ್ತು. ಈಗ ಇಲ್ಲದಿದ್ದರೂ ಚುನಾಯಿತ ಸಮಿತಿಯಿಂದ ಇದರ ವರದಿ ಬಂದಮೇಲಾದರೂ ನಮ್ಮ ಸರ್ಕಾರದವರು ಅಭಿಪ್ರಾಯ ವ್ಯಕ್ತಪಡಿಸಿದರೆ ಅನುಕೂಲವಾಗುತ್ತದೆ ಎಂದು ಹೇಳಿ, ಇಷ್ಟು ಕಾಲ ಮಾತನಾಡಿದುದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯ ಅಧ್ಯಕ್ಷರೆ, ಮಾನ್ಯಮಂತ್ರಿಗಳು ಮಂಡಿಸಿರತಕ್ಕ ಈ ಮಸೂದೆಗೆ ಬೆಂಬಲ ಕೊಡುತ್ತಾ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೨೭ ಸಾವಿರ ಹಳ್ಳಿಗಳು ಇವೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳು ತುಂಬಾ ಕೆಟ್ಟುಹೋಗಿವೆ ಈಗ ಗ್ರಾಮೀಣ ಪ್ರದೇಶಗಳ ರಸ್ತೆಗಳು ಅತ್ಯಗತ್ಯ ಇದೆ; ಅಂತಹ ಕಡೆಗಳಲ್ಲಿ ಎಲ್ಲಾ ಜೆಲ್ಲಿ ರಸ್ತೆಗಳು ಆಗಬೇಕಾಗಿದೆ. ಆದುದರಿಂದ ಇದಕ್ಕೆ ಹಣದ ಅವಶ್ಯಕತೆ ಕಂಡುಬಂದಿದೆ, ಹಣ ಇಲ್ಲದೇ ಇರುವುದರಿಂದ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ, ಇದು ಒಂದು ಒಳ್ಳೆಯ ಸದುದ್ದೇಶದಿಂದ ಕೂಡಿದೆ ಎಂದು ಹೇಳುತ್ತೇನೆ. ಇದರಲ್ಲಿ ಹೆಚ್ಚಿನ ತತ್ವವೇನೂ

ಅಡಗಿಲ್ಲ. ಇವತ್ತು ಮಾನ್ಯ ವಿರೋಧ ಪಕ್ಷದನಾಯಕರು ಮತ್ತು ಇತರೆ ಮಾನ್ಯ ಸದಸ್ಯರು ಮಾತನಾಡುತ್ತಾ ಇದು ಮಾರಾಟಮಾಡುವವರ ಮೇಲೆ ಈ ತೆರಿಗೆ ಬೀಳಬೇಕೋ, ಅಥವಾ ಕೊಂಡು ಕೊಳ್ಳುವವರ ಮೇಲೆ ಈ ತೆರಿಗೆ ಬೀಳಬೇಕೋ ಎನ್ನುವುದೇ ಇದರಲ್ಲಿ ಇರತಕ್ಕ ತತ್ವ ಎಂದು ತಿಳಿಸಿದರು. ಇದರಲ್ಲಿ ನಾವು ಪರಿಶೀಲನೆ ಮಾಡಿದರೆ ಈ ತೆರಿಗೆ ಕಲೆಕ್ಟ್ ಮಾಡುವುದಕ್ಕೆ ಯಾವುದು ಅನುಕೂಲ, ಮತ್ತೇ ಈ ಇನ್‌ಸಿಡೆಂಟ್ ಇದು ಯಾರ ತಲೆ ಮೇಲೆ ಟಿ ಈ ತೆರಿಗೆ ಬೀಳುತ್ತದೆ ಲೆಕ್ಕ ಹಾಕಿದರೆ ಕೊನೆಗೆ ಈ ತೆರಿಗೆ ಎಲ್ಲಾ ಬೀಳುವುದು ರೈತರ ತಲೆ ಮೇಲೆ. ಏಕೆಂದರೆ ಮಾರಾಟ ಮಾಡುವಾಗ ತೆರಿಗೆ ಕೊಟ್ಟರು ಅಷ್ಟೇ, ಕೊಂಡುಕೊಳ್ಳುವಾಗ ಕೊಟ್ಟರು ಅಷ್ಟೇ ಕೊನೆಗೆ ಈ ತೆರಿಗೆ ಬೀಳುವುದು ಎಲ್ಲಾ ರೈತರ ಮೇಲೆ. ಇದರಿಂದ ಹೆಚ್ಚಿನ ವ್ಯತ್ಯಾಸ ಏನು ನನಗೆ ಕಂಡುಬರುವುದಿಲ್ಲ. ಯಾರು ಕೊಂಡುಕೊಳ್ಳುತ್ತಾರೆ ಅವನು ತೆರಿಗೆ ಕೊಟ್ಟರೆ ಅವನು ಅವನ ಕೈಯಿಂದ ಕೊಡುವುದಿಲ್ಲ, ಅವನು ರೈತರಿಗೆ ಮಾರಾಟ ಮಾಡುವಾಗ ಅದನ್ನು ಸೇರಿಸಿ ವಸೂಲು ಮಾಡುತ್ತಾನೆ ಈ ಒಂದು ತತ್ವದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೇ ಸದಸ್ಯರು ಹೇಳುವುದು ರೈತರು ಯಾವರೀತಿಯಲ್ಲೂ ಇದನ್ನು ತಪ್ಪಿಸಿ ಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಆದ್ದರಿಂದ ಈ ತತ್ವವನ್ನು ಒಪ್ಪಿಕೊಂಡ ಮೇಲೆ ನಾವು ಈ ತಿದ್ದುಪಡಿ ಮಸೂದೆಯನ್ನು ಒಪ್ಪಿಕೊಳ್ಳುವುದು ಸೂಕ್ತ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಹಳ್ಳಿಗಾಡಿನವರಿಗೆ ಈ ರಸ್ತೆಗಳ ಅಗತ್ಯ ಬಹಳ ಜರೂರಾಗಿದೆ, ಅಲ್ಲದೇ ಅವರು ಬೆಳೆಯತಕ್ಕ ಪದಾರ್ಥ ಗಳನ್ನು ಮಾರುಕಟ್ಟೆಗೆ ತರಬೇಕಾಗುತ್ತದೆ, ಈಗ ಸಣ್ಣಪುಟ್ಟ ರೈತರು ಮಾರ್ಕೆಟ್ಟಿಗೆ ಬರುವುದಿಲ್ಲ. ಸಾಮಾನ್ಯವಾಗಿ ದೊಡ್ಡ ದೊಡ್ಡ ರೈತರು ಮಾರುಕಟ್ಟೆಗೆ ಬರುವುದು. ಇಲ್ಲಿ ತೆರಿಗೆ ವಿಧಿಸಿರುವುದನ್ನು ನೋಡಿದರೆ 100 ರೂಪಾಯಿಗೆ ಒಂದು ರೂಪಾಯಿ ಕೊಡಬೇಕು ಎಂದು ಇದೆ. ಏತಕ್ಕೆಂದರೆ ಇದು ಒಂದು ದೃಷ್ಟಿಯಿಂದ ಇದು ಹೆಚ್ಚಿಗೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಇದು ಸಣ್ಣಪುಟ್ಟ ಹಿಡುವಳಿದಾರರ ಮೇಲೆ ಕೂಲಿಗಾರರ ಮೇಲೆ ಇದು ಹೊರೆ ಬೀಳುವುದಿ ಈಗ ದೊಡ್ಡ ದೊಡ್ಡ ರೈತರು ಸೇರಿ ಮಾರುಕಟ್ಟೆಗೆ ಬರಬೇಕಾಗುತ್ತದೆ, ಅದನ್ನು ಅವರು ಕೊಡಬೇಕಾಗುತ್ತದೆ. ಅಲ್ಲದೇ ಇದನ್ನು ವಸೂಲು ಮಾಡುವುದು ಬಹಳ ಸುಲಭವಾಗುತ್ತದೆ ಎಂದು ಹೇಳುತ್ತೇನೆ. ಆದ್ದರಿಂದ ಈಗಸ್ಥಿತಂದಿರತಕ್ಕ ಒಂದು ತಿದ್ದುಪಡಿ ಮಸೂದೆಯನ್ನು ಒಪ್ಪಿಕೊಳ್ಳತಕ್ಕದ್ದು ಒಳ್ಳೆಯದು ಎಂದು ನನ್ನ ಭಾವನೆ. ಇನ್ನು ಒಂದು ವಿಚಾರ ಮಾನ್ಯ ಹಿರಿಯ ಸದಸ್ಯರಾದ ಕೆ. ಪುಟ್ಟಸ್ವಾಮಿಯವರು ಹೇಳಿದರು ಇದು ಸೆಲೆಕ್ಟ್ ಕಮಿಟಿಗೆ ಹೋಗಬೇಕು ಎಂದು ಇದರಲ್ಲಿ ಇರುವುದು ಕೇವಲ ಒಂದರೆಡು ಸಕ್ಷನ್. ಇದರಲ್ಲಿ ಅಂತಹ ಜಟಿಲವಾದ ಪ್ರಶ್ನೆ ಏನೂ ಇಲ್ಲ ಎಂದು ಹೇಳುತ್ತೇನೆ ಇದು ಕೊಳ್ಳುವವರ ಮೇಲೆ ಬೀಳಬೇಕೋ, ಅಥವಾ ಮಾರಾತ್ಕವರ ಮೇಲೆ ಬೀಳಬೇಕೋ ಎಂದು ಇದೆ ಇದು ಸಿಂಪಲ್ ಆಗಿರುವುದರಿಂದ ಇದನ್ನು ನಾವು ಒಪ್ಪಿಕೊಳ್ಳುವುದು ಒಳ್ಳೆಯದು.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ ತಾವು ತರಾತುರಿಯಿಂದ ಇದನ್ನು ಒಪ್ಪಿಕೊಳ್ಳಬೇಕು ಎಂದು ಹೇಳುತ್ತಿದ್ದೀರಿ, ಇದನ್ನು ಒಪ್ಪಿಕೊಳ್ಳದಿದ್ದರೆ ಏನು ಇದು ಬಿದ್ದುಹೋಗುತ್ತದೆಯೋ ?

ಶ್ರೀ ಕೆ. ಎಂ. ರುದ್ರಪ್ಪ.—ಇದರಿಂದ ಸರ್ಕಾರಕ್ಕೆ ಅವಕಾಶ ಮಾಡಿಕೊಡಬೇಕಾದ್ದು ಅವಶ್ಯಕತೆ ಇದೆ, ಆದ್ದರಿಂದ ಇದನ್ನು ಒಪ್ಪಿಕೊಳ್ಳಬೇಕು ಎಂದು ಹೇಳುತ್ತಾ ಇರುವುದು ರಸ್ತೆಮಾಡಿಸಬೇಕೆಂದು ನಾವೇ ಹೇಳುತ್ತಿರುವ ಕಾರಣ ಇದನ್ನು ಒಪ್ಪಿಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ ಸರ್ಕಾರದ ಹತ್ತಿರ ಹಣ ಇಲ್ಲದಿದ್ದರೆ ಅವರು ತಾನೆ ಯಾವ ರೀತಿ ಮಾಡಿಸುತ್ತಾರೆ ? ಅಧಿಕಾರಿಗಳಿಗೆ ಮತ್ತು ನೌಕರರಿಗೆ 20 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಡಿ.ಎ. ಕೊಡುವ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರೇ ಒಪ್ಪಿಕೊಂಡಿದ್ದಾರೆ. ಅದರ ಜೊತೆಗೆ ಈ ರಸ್ತೆಗಳಿಗೂ ಹಣ ಖರ್ಚು ಮಾಡಬೇಕೆಂದರೆ ಅದು ಸಾಧ್ಯವಿಲ್ಲದ ಮಾತಾಗುತ್ತದೆ. ರಸ್ತೆಗಳನ್ನು ಮಾಡಿಸಲು ಸರ್ಕಾರಕ್ಕೆ ಹಣ ಬೇಕಾಗುತ್ತದೆ ; ಆದಕಾರಣ ಈ ಸೆಸ್ ಹಾಕುವುದು ಒಳ್ಳೆಯದು. ಈ ಒಂದು ತತ್ವವನ್ನು ಈಗಾಗಲೇ ಎಲ್ಲರೂ ಒಪ್ಪಿಕೊಂಡಿರುವ ಕಾರಣದಿಂದ ಈ ತಿದ್ದುಪಡಿ ಮಸೂದೆಯನ್ನು ಸಹ ಎಲ್ಲರೂ ಒಪ್ಪಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಲೋಕೋಪ ಯೋಗಿ ಇಲಾಖೆಯ ಸಚಿವರು ತಂದಿರುವ ಈ ಮಸೂದೆಯನ್ನು ವಿರೋಧಿಸಿ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಮಸೂದೆಯ ಉದ್ದೇಶ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ಮಾಡಿಸಬೇಕು ಎಂಬುದು; ಈ ಒಂದು ಉದ್ದೇಶ ಒಳ್ಳೆಯದೇ ಇದ್ದರೂ ಸಹ ಅದರ ಹಿಂದಿರುವ ತತ್ವ ವನ್ನು ನೋಡಿದಾಗ, ಅದು ಒಂದು ರೀತಿಯಲ್ಲಿ ರೈತರ ಹಿತಕ್ಕೆ ಕೊಡಲಿಪೆಟ್ಟು ಬೀಳುವುದಾಗಿದೆ. ರಸ್ತೆ ಗಳನ್ನು ಮಾಡಿಸಲು ಈ ರೀತಿ ಒಂದು ನಿಧಿ ಮಾಡುವುದಕ್ಕೆ ಬದಲು ಬೇರೆ ರೀತಿಯಿಂದ ಇದಕ್ಕೆ ಹಣ

ಒದಗಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಆದರೆ ಇಲ್ಲಿ ರೈತರ ಮೇಲೆ ಮಾತ್ರ ತೆರಿಗೆ ಹಾಕುವುದಕ್ಕೆ ಹೊರಟಿರುವುದು ಸರಿಯಾದ ಕ್ರಮವಲ್ಲ; ಕಳೆದ ೩ ವರ್ಷಗಳಿಂದ ನಾನು ನೋಡುತ್ತಿದ್ದೇನೆ, ಪ್ರತಿವರ್ಷವೂ ಸಹ ಒಂದಲ್ಲ ಒಂದು ರೀತಿಯ ತೆರಿಗೆಗಳನ್ನು ಆ ಬಡಪಾಯಿಗಳ ಮೇಲೆ ಹಾಕುತ್ತಲೇ ಇದ್ದಾರೆ. ಇದನ್ನು ನೋಡಿ ನನಗೆ ಬಹಳ ವ್ಯಥೆಯಾಗಿದೆ. ಈ ರೀತಿ ತೆರಿಗೆಯನ್ನು ಹಾಕದಿದ್ದರೆ ನಿಮಗೆ ಸಮಾಧಾನವಾಗುವುದಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು.--ನಮ್ಮ ರಾಜ್ಯದಲ್ಲಿ ಶೇಕಡಾ ೮೦ರಷ್ಟು ರೈತರಿದ್ದಾರೆ, ಆದಕಾರಣ ತೆರಿಗೆಯನ್ನು ಕೊಡಲು ಅವರನ್ನು ಬಿಟ್ಟರೆ ಇನ್ನು ಬೇರೆ ಯಾರಿದ್ದಾರೆ ?

ಶ್ರೀ ಎಚ್. ಡಿ. ದೇವೇಗೌಡ. ಸರ್ಕಾರಕ್ಕೆ ರೈತರು ಕರೆಯುವ ಎಮ್ಮೆ ಇದ್ದಂತೆ ಇದ್ದಾರೆ. ಆದರೆ ಕೆಚ್ಚಲನ್ನೇ ಕತ್ತರಿಸುವುದಕ್ಕೆ ನೀವು ಹೋಗಬೇಡಿ; ಹಾಗೇನಾದರೂ ಮಾಡಿದ್ದೇ ಆದರೆ ಅವರು ನಿಮ್ಮ ಬುಡಕ್ಕೇ ಕೊಡಲಿ ಪೆಟ್ಟು ಹಾಕುತ್ತಾರೆ.

ಶ್ರೀ ಕೆ ಎಚ್. ಹನುಮೇಗೌಡ.—ಈ ಸೆಸ್ ವಸೂಲಿ ಮಾಡುವ ಅಧಿಕಾರವನ್ನು ರೆಗ್ಯುಲೇಟೆಡ್ ಕಮಿಟಿಯವರಿಗೆ ಕೊಡುತ್ತಿದ್ದೀರಿ; ಇಂದು ಇದು ಒಂದು ದೊಡ್ಡ ಹುಲ್ಲುಗಾವಲಾಗಿಬಿಟ್ಟಿದೆ. ಅದರಲ್ಲಿ ಹಾವು, ಚಿರತೆ ಎಲ್ಲ ಸೇರಿಕೊಂಡಿವೆ. ರೈತರನ್ನು ತಿಂದು ಜೀರ್ಣ ಮಾಡಿಕೊಳ್ಳುವವರು ಅದರಲ್ಲಿದ್ದಾರೆ ಅಂತಹವರಿಗೆ ಈ ಟ್ಯಾಕ್ಸ್ ವಸೂಲಿ ಮಾಡುವ ಅಧಿಕಾರ ಕೊಡುತ್ತಿದ್ದೀರಿ. ಇಂದು ಅವರ ವ್ಯವಹಾರವನ್ನು ಹೇಳುವುದಕ್ಕೆ ಸಾಧ್ಯವಿಲ್ಲ; ಅವರಿಗೆ ಓಡಾಡಲು ಒಂದೊಂದು ಜೀಪ್ ಬೇರೆ ಕೊಟ್ಟಿದ್ದೀರಿ; ಅವರು ಆ ಜೀಪಿನಲ್ಲಿ ಎಲ್ಲಿಗೆ ಹೋಗುತ್ತಾರೆ ಏತಕ್ಕೆ ಹೋಗುತ್ತಾರೆ, ಅಲ್ಲಿ ಏನು ಮಾಡುತ್ತಾರೆ ಎಂಬುದೇ ನಮಗೆ ತಿಳಿಯುತ್ತಿಲ್ಲ; ಯಾರ ಯಾರ ಮನೆ ಮುಂದೆಯೋ ಅವು ನಿಂತಿರುತ್ತವೆ. ಏತಕ್ಕೆ ನಿಂತಿರುತ್ತವೆ ಎಂಬುದು ಯಾರಿಗೂ ತಿಳಿಯುವುದಿಲ್ಲ; ಅವರ ವ್ಯವಹಾರ ದೊಡ್ಡ ಕುಮ್ಮಕಾಂಡದಂತೆ ಇದೆ. ಅವರು ರೈತರಿಗೆ ಸರಿಯಾದ ರೀತಿಯಲ್ಲಿ ಪ್ರಚಾರ ಮಾಡುವುದಿಲ್ಲ; ಅದರ ಬದಲು ಮಳೆ ಬಂದಾಗ ರೈತರು ಕಷ್ಟಪಟ್ಟು ಏನಾದರೂ ಬೆಳೆದರೆ, ಅದನ್ನು ಸುಲಿಗೆ ಮಾಡಲು ಹೋಗುತ್ತಾರೆ. ವ್ಯಾಪಾರಿಗಳ ತರಹ ಇವರೂ ಸಹ ಸುಲಿಗೆ ಮಾಡುತ್ತಿದ್ದಾರೆ ಮಾಡಬಾರದ ಅವ್ಯವಹಾರಗಳನ್ನು ಮಾಡುತ್ತಿದ್ದಾರೆ. ನಾನೂ ಸಹ ಒಬ್ಬ ರೈತನಾಗಿದ್ದೇನೆ. ಹಾಸನಕ್ಕೆ ಹತ್ತು ಮೈಲಿ ದೂರದಲ್ಲಿ ನನ್ನ ಜಮೀನು ಇದೆ. ಅಪ್ಪಿ ತಪ್ಪಿ ಮಳೆಯಾದಾಗ ನಾನು ಒಂದೆರೆಡು ಸಲ ಆಲೂಗೆಡ್ಡೆ ಬೆಳೆದು ಅದನ್ನು ಮುಂಬೈ ಮತ್ತು ಅಹಮದಾಬಾದ್‌ಗೆ ಕಳುಹಿಸಲು ಏರ್ಪಾಡು ಮಾಡಿದಾಗಲೂ ಸಹ ಇದೇ ಮಾರ್ಕೆಟ್ ಕಮಿಟಿಯವರು ಬಂದು ಟ್ಯಾಕ್ಸ್ ವಸೂಲಿ ಮಾಡಿದರು; ಇವರು ಟ್ಯಾಕ್ಸ್ ವಸೂಲಿ ಮಾಡಲು ಮುಂದೆ ಬರುತ್ತಾರೆಯೇ ಹೊರತು, ಸಾಲ ಕೊಡಲು ಮುಂದೆ ಬರುವುದಿಲ್ಲ ಮಾರ್ಕೆಟ್‌ನಲ್ಲಿ ಬೆಲೆಗಳು ಏನಾದರೂ ಕಡಿಮೆ ಇದ್ದರೆ, ಅಂತಹ ಸಮಯದಲ್ಲಿ ಹಣದ ಸಹಾಯ ಮಾಡಲು ಮುಂದೆ ಬರುವುದಿಲ್ಲ; ಪ್ರತಿಯೊಂದು ಕಮಿಟಿಯವರು ಸಹ ತಮ್ಮ ವ್ಯಾಪ್ತಿಯಲ್ಲಿ ಯಾವ ಯಾವ ಪ್ರದೇಶಗಳು ಒಳಪಡುತ್ತವೆ ಎಂಬುದನ್ನು ಪ್ರಕಟ ಮಾಡಿಬಿಟ್ಟಿದ್ದಾರೆ. ಅಂತಹ ಪ್ರದೇಶಗಳಲ್ಲಿ ಬೆಳೆದ ಬೆಳೆಯನ್ನು ಮಾರಾಟ ಮಾಡಿದರೆ ಟ್ಯಾಕ್ಸ್ ಕೊಡಬೇಕು; ಜೊತೆಗೆ ಇವರು ದಳ್ಳಾಳಿಯ ತರಹ ರೈತರಬಳಿ ಬಂದು ಎತ್ತುಗಳನ್ನು ಏನಾದರು ಮಾರಾಟ ಮಾಡಿದೆಯಾ ಎಂದು ಕೇಳುತ್ತಾರೆ; ಅವರೇನಾದರೂ ೫೦೦ ರೂಪಾಯಿಗಳಿಗೆ ಮಾರಾಟ ಮಾಡಿದೆ ಎಂದು ತಿಳಿಸಿದರೆ ೧೦–೧೫ ರೂಪಾಯಿಗಳವರೆಗೆ ಟ್ಯಾಕ್ಸ್ ವಸೂಲಿ ಮಾಡುತ್ತಾರೆ. ತಿಳಿಯದ ರೈತರಾದರೆ ೫೦ ರೂಪಾಯಿಗಳವರೆಗೂ ವಸೂಲಿ ಮಾಡುತ್ತಾರೆ. ಇದಕ್ಕೆ ಒಂದು ಮಿತಿ ಬೇಡವೇ? ಮೂಗ ಹುಲ್ಲು ಹಾಕಿದ, ಮಂಗಳು ನೀರು ಕುಡಿಸಿ ಬೆಳೆಸಿದ ದನಗಳನ್ನು ಮಾರಾಟ ಮಾಡಿದರೆ ಟ್ಯಾಕ್ಸ್ ಏತಕ್ಕೆ ಕೊಡಬೇಕು ಎಂದು ರೈತರು ಕೇಳಿದರೆ, ಅಂತಹವರಿಗೆ ಹೊಸ ಕಾನೂನು ಪ್ರಕಾರ ಕೊಡಲೇಬೇಕೆಂದು ಭಯ ಹುಟ್ಟಿಸುತ್ತಾರೆ. ಟ್ಯಾಕ್ಸ್ ವಸೂಲಿ ಮಾಡಿದಾಗ ರಶೀತಿ ಕೊಡಬೇಕಾಗುತ್ತದೆ. ಅದರಲ್ಲಿ ಸಹ ಡೂಪ್ಲಿಕೇಟ್ ಮತ್ತು ಒರಿಜನಲ್ ಎಂದು ಎರಡು ತರಹ ಇಟ್ಟುಕೊಂಡಿರುತ್ತಾರೆ. ಈ ರೀತಿ ಅವರು ಎರಡು ತರಹ ರಶೀದಿ ಇಟ್ಟುಕೊಂಡಿರುವ ಕಾರಣ, ಸರ್ಕಾರಕ್ಕೆ ಬರಬೇಕಾದಷ್ಟು ತೆರಿಗೆ ಹಣ ಬರುತ್ತಿಲ್ಲ; ಡೂಪ್ಲಿಕೇಟ್ ರಶೀದಿ ಮೂಲಕ ಹಣ ವಸೂಲಿವಸೂಲಿ ತಮ್ಮ ಸ್ವಂತಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಧರ್ಮರಾಯರು ಅದರಲ್ಲಿದ್ದಾರೆ. ಅಂತಹವರ ಕೈಗೇ ಈ ಟ್ಯಾಕ್ಸನ್ನು ಸಹ ವಸೂಲಿ ಮಾಡುವ ಅಧಿಕಾರ ಕೊಟ್ಟರೆ ಇನ್ನೂ ಹೆಚ್ಚಿನ ಅವ್ಯವಹಾರ ನಡೆಯುವುದಕ್ಕೆ ಅವಕಾಶವಾಗುತ್ತದೆ. ಈ ಮನೆಗೆ ಆರಿಸಿ ಬಂದಿರುವವರ ಪೈಕಿ ಶೇಕಡಾ ೭೫ರಷ್ಟು ಮಾನ್ಯ ಸದಸ್ಯರು ರೈತರ ಓಟಿನ ಮೂಲಕವೇ ಆರಿಸಿ ಬಂದಿದ್ದಾರೆ. ಈ ಕಾರಣದಿಂದ ಎಲ್ಲರೂ ಅವರ ಬಗ್ಗೆ ಮಾತನಾಡುತ್ತಾರೆ, ಅವರ ಬಗ್ಗೆ ವ್ಯಥೆ ಪಟ್ಟುಕೊಂಡು ಮಾತನಾಡುತ್ತಾರೆ, ಆದರೆ ವರ್ಷ ವರ್ಷವೂ ಹೊಸ ಹೊಸ ತೆರಿಗೆಗಳನ್ನು ಅವರ ಮೇಲೆ ಹಾಕುವುದನ್ನು ಮಾತ್ರ

ನಿಲ್ಲಿಸುವುದಿಲ್ಲ; ಇಂದು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳಲ್ಲಿ ಕೆಲಸಮಾಡುತ್ತಿರುವವರು ಕಟುಕರಾಗಿದ್ದಾರೆ. ಪುರಾಣಕಾಲದ ಬ್ರಹ್ಮ ಇವರಿಗೆ ಶಿಕ್ಷೆ ಕೊಡುವುದಕ್ಕೆ ಸಾಧ್ಯವಿಲ್ಲ; ಇವರು ಮಾಡುತ್ತಿರುವ ತಪ್ಪುಗಳಿಗೆ ಮತ್ತು ನೀಚ ಕೆಲಸಗಳಿಗೆ ಶಿಕ್ಷೆ ವಿಧಿಸಲು ಹೊಸ ಒಬ್ಬ ಬ್ರಹ್ಮನೇ ಹುಟ್ಟಿ ಬರಬೇಕಾಗಿದೆ. ಅಂತಹ ಪರಮ ನೀಚರಾಗಿದ್ದಾರೆಂದು ಹೇಳಬಹುದು; ಇದಕ್ಕೂ ಕೆಟ್ಟ ಪದಗಳನ್ನು ಈಗ ಉಪಯೋಗಿಸುವುದಕ್ಕೆ ನಾನು ಇಷ್ಟಪಡುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ತಮಗೆ ಒಂದು ಡಿಕ್ಸ್‌ನರಿಯನ್ನು ತಂದುಕೊಡುತ್ತೇನೆ; ಅದನ್ನು ನೋಡಿ ಬೇಕಾದರೆ ತಾವು ಪದಗಳನ್ನು ಉಪಯೋಗ ಮಾಡಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಅವರ ಟೆಂಪರೇಚರ್ ಯಾವ ಯಾವ ಡಿಗ್ರಿಯಲ್ಲಿರುತ್ತದೋ, ಅದಕ್ಕನುಸಾರವಾಗಿ ಅವರು ಪದಗಳನ್ನು ಉಪಯೋಗ ಮಾಡುತ್ತಾರೆ. ಆದಕಾರಣ ತಾವು ಅವರಿಗೆ ಡಿಕ್ಸ್‌ನರಿಯನ್ನು ಕೊಟ್ಟರೂ ಸಹ ಅವರಿಗೆ ಬೇಕಾದ ಪದಗಳು ಅದರಲ್ಲಿ ಸಿಗುವುದಿಲ್ಲ; ಅವರ ಟೆಂಪರೇಚರ್‌ಗೆ ತಕ್ಕಂಥ ಪದಗಳನ್ನು ಉಪಯೋಗ ಮಾಡಿದರೆ, ಅದನ್ನು ತಾವು ಕೇಳಲೇಬೇಕು

ಶ್ರೀ ಬಿ. ಪುಟ್ಟಸ್ವಾಮಯ್ಯ.—ರೈತರ ಕಷ್ಟಗಳನ್ನು ಹೋಗಲಾಡಿಸುವುದಕ್ಕಾಗಿ ಈ ಗೌಡರು ಹೊಸ ಅವತಾರ ಎತ್ತಿದ್ದಾರೆ.

ಶ್ರೀ ಎನ್ ಹುಚ್ಚಮಾಸ್ತಿಗೌಡ.- ಅವರ ಶಬ್ದ ಭಂಡಾರದಲ್ಲಿ ಅದೇ ಪದಗಳಿರುವುದು; ಆದಕಾರಣ ಅವರು ಮಾತನಾಡುವಾಗಲೆಲ್ಲಾ ಆ ಪದಗಳು ತಾನಾಗಿಯೇ ಬರುತ್ತವೆ.

ಶ್ರೀ ಎಚ್. ಡಿ ದೇವೇಗೌಡ —ಅವರು ಈ ಸಭೆಗೆ ಬಂದ ಮೊದಲನೆಯ ವರ್ಷದಲ್ಲಿ ಬಹಳ ಸೌಮ್ಯವಾದ ಭಾಷೆಯನ್ನೇ ಉಪಯೋಗ ಮಾಡಿದ್ದಾರೆ. ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ; ಆದಕಾರಣ ಇತ್ತೀಚೆಗೆ ಅವರು ಇಂತಹ ಪದಗಳನ್ನು ಉಪಯೋಗ ಮಾಡುತ್ತಿದ್ದಾರೆ ಈ ಹಿಂದಿನ ರೆಕಾರ್ಡ್ ತೆಗೆದುಕೊಂಡು ನೋಡಿದರೆ ನಾನು ಹೇಳಿದ್ದು ಸರಿಯೋ ಅಥವಾ ತಪ್ಪೋ ಎಂಬುದು ತಮಗೇ ತಿಳಿಯುತ್ತದೆ,

ಶ್ರೀ ಎಸ್. ಎಂ. ಕೃಷ್ಣ.—ಚಂಡಾಲರು, ನೀಚರು, ಅಧಮರು, ಪಾಪಿಷ್ಟರು ಎಂಬತಕ್ಕ ಪದಗಳನ್ನು ತಾವು ಉಪಯೋಗಮಾಡಿದ್ದು ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿರುವರಿಗೆ ತಾನೆ ?

ಶ್ರೀ ಕೆ. ಎಚ್. ಹನುಮೇಗೌಡ.—ಹೌದು; ಈಗ ಈ ಮಾರ್ಕೆಟ್‌ಗಳನ್ನು ಸ್ಥಾಪನೆ ಮಾಡಿರುವುದರ ಉದ್ದೇಶವಾದರೂ ಏನು? ರೈತರು ತಾವು ಬೆಳೆದ ಸಾಮಾನುಗಳನ್ನು ಮಾರ್ಕೆಟ್‌ಗೆ ತಂದರೆ ಒಳ್ಳೆಯ ರೀತಿಯಿಂದ ವ್ಯಾಪಾರ ಮಾಡಲು ಅವಕಾಶ ಮಾಡಿಕೊಡುವುದು, ತೂಕದಲ್ಲಿ ಅನ್ಯಾಯವಾಗದಂತೆ ನೋಡಿಕೊಳ್ಳುವುದು, ಅವರು ತಂದ ಸಾಮಾನುಗಳಿಗೆ ಮಾರ್ಕೆಟ್‌ನಲ್ಲಿ ಸರಿಯಾದ ಧಾರಣೆ ಇಲ್ಲದಿದ್ದರೆ, ಆ ಸಾಮಾನುಗಳನ್ನು ಅಲ್ಲಿಯೇ ಸ್ಟೋರ್ ಮಾಡಿಕೊಂಡು ಅದರ ಆಧಾರದ ಮೇಲೆ ಅವರಿಗೆ ಅಡ್ವಾನ್ಸ್‌ನ್ನು ಕೊಟ್ಟು, ಒಳ್ಳೆಯ ರೇಟ್ ಬಂದಾಗ ಮಾರಾಟಮಾಡುವುದಕ್ಕೆ ವ್ಯವಸ್ಥೆ ಮಾಡುವುದು; ಈ ಒಂದು ತತ್ವದ ಆಧಾರದ ಮೇಲೆ ಇಡೀ ರಾಜ್ಯದಲ್ಲಿ ಎಲ್ಲ ಕಡೆಗಳಲ್ಲಿಯೂ ವ್ಯವಹಾರ ನಡೆಯಬೇಕೆಂಬ ದೃಷ್ಟಿಯಿಂದ ಇದನ್ನು ಸ್ಥಾಪನೆ ಮಾಡಿರುವುದು; ಆದರೆ ಇದು ಈ ಒಂದು ತತ್ವದ ಆಧಾರದಮೇಲೆ ನಬೆಯುತ್ತಿಲ್ಲ; ಈ ಯಾವ ಅನುಕೂಲಗಳನ್ನು ಮಾಡಿಕೊಡದೆ ತೆರಿಗೆ ವಸೂಲಿ ಮಾಡುವುದೇ ಅವರ ಕೆಲಸವಾಗಿ ಬಿಟ್ಟಿದೆ. ರಾಜ್ಯದ ಯಾವುದಾದರೂ ಒಂದು ಭಾಗದಲ್ಲಿ ಈ ಒಂದು ತತ್ವದ ಆಧಾರದ ಮೇಲೆ ನಡೆಯುತ್ತಿದೆ ಎಂಬುದನ್ನು ತಾವು ತೋರಿಸಿಕೊಟ್ಟುಬಿಟ್ಟರೆ ನಾನು ನೀವು ಹೇಳುವ ಶಿಕ್ಷೆಗೆ ಗುರಿಯಾಗುತ್ತೇನೆ. ಈ ಮೆಂಬರ್‌ಗಿರಿ ಬಿಟ್ಟು ಬೇಕಾದರೆ ಹೋಗುತ್ತೇನೆ. ನಾನು ನೆನ್ನೆದಿವಸ ಹೇಳಿದಂತೆ ಇವರು ಜನಕ್ಕಾಗಲೀ ದೆವ್ವಕ್ಕಾಗಲೀ ಹೆದರುವುದಿಲ್ಲ; ಇವರಿಂದ ಏನೂ ಆಗುವುದಿಲ್ಲವೆಂಬ ತೀರ್ಮಾನಕ್ಕೆ ನಾನು ಬಂದು ಬಿಟ್ಟಿದ್ದೇನೆ. ಅಲ್ಲಿ ಇಂದು ಉತ್ತಮವಾದ ಕೆಲಸಕಾರ್ಯಗಳೇ ನಡೆಯುತ್ತಿಲ್ಲ; ನ್ಯಾಯ ಧರ್ಮ ಎಂಬುದು ಇಲ್ಲವಾಗಿದೆ; ಅಲ್ಲಿ ಏನಿದ್ದರೂ ಸುಲಿಗೆ, ದರೋಡೆ, ಶೋಷಣೆ ನಡೆಯುತ್ತಿದೆ; ದುಡ್ಡು ಇನ್ನೂ ಜಾಸ್ತಿ ಇದ್ದರೆ ಕೊಲೆಗಳೂ ಸಹ ನಡೆಯುತ್ತಿದ್ದವೆಂದು ಕಾಣುತ್ತದೆ. ಇಂತಹ ಜನರ ಕೈಗೆ ಈ ಟ್ಯಾಕ್ಸ್‌ನ್ನು ಸಹ ಕಲೆಕ್ಟ್ ಮಾಡುವುದಕ್ಕೆ ಅಧಿಕಾರ ಕೊಡುತ್ತಿರುವುದರ ಔಚಿತ್ಯವಾದರೂ ಏನು ಎಂದು ಮಾನ್ಯ ಚೆನ್ನಬಸಪ್ಪನವರನ್ನು ಕೇಳುತ್ತೇನೆ.

ತುಮಕೂರು ಕಡೆಯಿಂದ ಕೋಣಗಳನ್ನು ಮಾರಲು ಮಂಗಳೂರು ಕಡೆಗೆ ಹೊಡೆದುಕೊಂಡು ಹೋಗುತ್ತಾರೆ. ಅಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿ ಯಾರ್ಡಿನಲ್ಲಿ ಮಾರಲು ಹೋದರೆ ರೈತರಿಂದ ಐವತ್ತು ಇಲ್ಲವೇ ಅರವತ್ತು ರೂಪಾಯಿ ಹಣ ಹೆಚ್ಚು ವಸೂಲು ಮಾಡುತ್ತಾರೆ. ಸಿಕ್ಕಾಪಟ್ಟೆ ರೈತರನ್ನು ಇಲ್ಲಿ ಸುಲಿಗೆ ಮಾಡುತ್ತಿದ್ದಾರೆ. ಆದುದರಿಂದ ರೈತರ ಮೇಲೆ ಹೆಚ್ಚು ಹೊರೆ ಹಾಕಲು ಹೋಗಬೇಡಿ. ಈಗ ಏನು ಮಾಡುತ್ತಿದ್ದಾರೆ ಎಂದರೆ ರೈತರನ್ನು ದರೋಡೆ ಮಾಡುವಂತೆ ಸುಲಿಗೆ ಮಾಡುತ್ತಿದ್ದಾರೆ.

ಇದರಿಂದ ರೈತಾಪಿ ಬಡಜನಕ್ಕೆ ತುಂಬಾ ಅನ್ಯಾಯವಾಗುತ್ತಿದೆ. ಇಂಥ ಅನ್ಯಾಯಗಳನ್ನು ತಡೆಯಲು ಇದುವರೆಗೂ ಯಾವ ಸರಕಾರಕ್ಕೂ ಆಗಲಿಲ್ಲ. ಹಾಸನದಲ್ಲಿ ಬೇಕಾದರೆ ಬನ್ನಿ ತಮಗೆ ತೋರಿಸುತ್ತೇನೆ. ರೆಗ್ಯೂಲೇಟೆಡ್ ಕಮಿಟಿಯಲ್ಲಿ ಡ್ಯೂಪ್ಲಿಕೇಟು ರಶೀತಿ ಎಂದು ಕೊಡುತ್ತಿದ್ದಾರೆ. ಒಟ್ಟಿನಲ್ಲಿ ರಶೀತಿ ಎಲ್ಲಿದೆಯೋ ಯಾರಿಗೂ ಗೊತ್ತಾಗುತ್ತಿಲ್ಲ, ಇದರ ಲೆಕ್ಕ ಪತ್ರಗಳು ಯಾರ ಕೈಗೂ ಸಿಗುತ್ತಿಲ್ಲ. ಇಂತಹ ಒಂದು ಕೆಟ್ಟ ಪದ್ಧತಿ ರೆಗ್ಯುಲೇಟೆಡ್ ಮಾರುಕಟ್ಟೆಗಳಲ್ಲಿ ನಡೆದುಕೊಂಡು ಬರುತ್ತಿದೆ. ಇದನ್ನು ಯಾರೂ ತಡೆಯುವ ಹಾಗಿಲ್ಲ.

5-00 P.M.

ಶ್ರೀ ಡಿ. ದೇವರಾಜ ಅರಸ್.—ಇಲ್ಲಿರುವುದು ಎಲೆಕ್ಟೆಡ್ ಬಾಡಿ ಹೌದೋ ಅಲ್ಲವೋ ?

ಶ್ರೀ ಕೆ. ಹೆಚ್. ಹನುಮೇಗೌಡ.—ಇದು ಎಲೆಕ್ಟೆಡ್ ಬಾಡಿಯೇನೋ ಹೌದು.

ಶ್ರೀ ಡಿ. ದೇವರಾಜ ಅರಸ್.—ಈ ಎಲೆಕ್ಟೆಡ್ ಬಾಡಿಯಲ್ಲಿ ಮೋಸ, ದರೋಡೆ ಇಂತಹವುಗಳು ಆಗದ ಹಾಗೆ ಮಾಡಿ ಎಂದು ತಾವು ಹೇಳುತ್ತಿರುವುದು ಅಲ್ಲವೇ ?

ಶ್ರೀ ಕೆ. ಹೆಚ್. ಹನುಮೇಗೌಡ.—ಜನರಲ್ ಎಲೆಕ್ಷನ್ ನಡೆಯುವ ಹಾಗೆ ಇಲ್ಲೂ ಎಲೆಕ್ಷನಗಳು ನಡೆಯುತ್ತವೆ.

ಶ್ರೀ ಡಿ.ದೇವರಾಜ ಅರಸ್ —ರೆಗ್ಯೂಲೇಟೆಡ್ ಮಾರ್ಕೆಟ್ಟು ಕಮಿಟಿಗಳಲ್ಲಿ ಕೋ ಅಪರೇಷನ್ ಮೇಲೆ ಕೆಲಸಗಳು ನಡೆಯುತ್ತೋ ಇಲ್ಲವೋ ಅದನ್ನು ಹೇಳಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ಪ್ರಶ್ನೆಗೆ ನಾನು ಉತ್ತರ ಕೊಡಬೇಕಾದರೆ ಅಧಿಕಾರವನ್ನು ನನ್ನ ಕೈಗೆ ಕೊಟ್ಟರೆ ಆಗ ಹೇಳಬಹುದು. ಈಗ ಇಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ಮಾತ್ರ ಇಲ್ಲಿ ಹೇಳುತ್ತಿದ್ದೇನೆ. ಇಲ್ಲಿ ದುಡ್ಡು ಹೇಗೆ ಹೊಡೆಯುತ್ತಿದ್ದಾರೆ ಎನ್ನುವುದಕ್ಕೆ ಬೇಕಾದರೆ ನೀವುಗಳು ನನ್ನ ಜೊತೆ ಬನ್ನಿ, ಯಾವ ರೀತಿಯಾಗಿ ಇಲ್ಲಿ ಲೂಟಿ ಮಾಡುತ್ತಿದ್ದಾರೆ ಎನ್ನುವ ಪರಿಚಯವನ್ನು ತಮಗೆ ಮಾಡಿಸಿ ಕೊಡುತ್ತೇನೆ. ಬೇಕಾದರೆ ನಮ್ಮ ರೆಗ್ಯುಲೇಟೆಡ್ ಮಾರ್ಕೆಟ್ಟು ಮಂತ್ರಿಗಳು ನನ್ನೊಡನೆ ಟೆಸ್ಟ್ ಮಾಡಲು ಒಂದು ಸಾರಿ ಬರಲಿ ಅವರಿಗೆ ಇಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ತೋರಿಸಿಕೊಡುತ್ತೇನೆ. ಆಗಲಾದರೂ ಅವರು ಇಲ್ಲಿರುವ ಅನ್ಯಾಯಗಳನ್ನು ಸರಿಯಾಗಿವೆ ಎಂದು ತಿಳಿದು ಆಗಲಾದರೂ ನ್ಯಾಯವಾಗಿ ರೈತರ ಹಿತವನ್ನು ಸಂರಕ್ಷಣೆ ಮಾಡಲು ತಕ್ಕ ಕ್ರಮಗಳನ್ನು ಕೈಗೊಳ್ಳಲು ಅವರಿಗೆ ಸಹಾಯವಾಗುತ್ತದೆ. ಬೇಕಾದರೆ ನಮ್ಮ ಮಾನ್ಯ ಮಂತ್ರಿಗಳು ನನ್ನ ಕ್ಷೇತ್ರವಾದ ಹಾಸನಕ್ಕೆ ಬಂದರೂ ಚಿಂತೆ ಇಲ್ಲ, ಅವರಿಗೆ ಇದರ ವ್ಯವಹಾರಗಳನ್ನು ಚೆನ್ನಾಗಿ ಪರಿಚಯ ಮಾಡಿಕೊಡುತ್ತೇನೆ. ಇಲ್ಲಿ ಆಲೂಗಡ್ಡೆ ವ್ಯಾಪಾರ ಮಾಡುವವರು ಯಾವ ರೀತಿ ಆಲೂಗಡ್ಡೆ ಮೂಟೆಗಳಲ್ಲಿ ಬಟ್ಟೆಗಳನ್ನು ತುಂಬಿ ಬೊಂಬಾಯಿಗೆ ಲಾರಿಗಳಲ್ಲಿ ಕಳುಹಿಸುತ್ತಾರೆ ಮತ್ತು ಇವರುಗಳು ರೆಗ್ಯೂಲೆಟಡ್ ಮಾರ್ಕೆಟ್ ಕಮಿಟಿಗಲ್ಲಿ ಯಾವ ರೀತಿ ಅವ್ಯವಹಾರಗಳನ್ನು ನಡೆಸುತ್ತಿದ್ದಾರೆ ಅದನ್ನು ತಮಗೆ ತೋರಿಸಿ ಕೊಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್ —ಹಾಗಾದರೆ ಕಮಿಟಿಗೆ ನೇಮಕ ಮಾಡಿರುವವರು ಎಲ್ಲರೂ ಸರಿಯಾಗಿಲ್ಲ ಇವರೇ ಇದಕ್ಕೆಲ್ಲಾ ಕಾರಣರು ಎಂದು ತಮ್ಮ ಅಭಿಪ್ರಾಯವೋ ?

ಶ್ರೀ ಕೆ. ಹೆಚ್. ಹನುಮೇಗೌಡ —ಹಾಲ ಕೊಡುವ ಆಕಳು ರೈತರು ಎಂದು ಆಕಳ ಕೆಚ್ಚಲನ್ನು ಕುಯ್ಯುವುದಕ್ಕೆ ಹೋಗಬೇಡಿ. ನಿಮ್ಮ ಅಧಿಕಾರಿಗಳು ಆ ರೀತಿ ರೈತರನ್ನು ಸುಲಿದು ಹಿಂಸೆಗೆ ಗುರಿ ಮಾಡುತ್ತಿದ್ದಾರೆ. ಇದರಿಂದಾಗಿ ರೈತರು ಇವರ ಕಷ್ಟಗಳಿಂದ ಪಾರಾಗಲು ಸಾಧ್ಯವೇ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಅಧಿಕಾರಿಗಳು ಸರಿಯಾಗಿಲ್ಲ ಎಂದರೆ ಯಾವ ಅಧಿಕಾರಿಗಳು ತಪ್ಪು ಮಾಡಿರುವವರು ಎನ್ನುವುದನ್ನು ನಿರ್ದಿಷ್ಟವಾಗಿ ಹೇಳದೆ ಸುಮ್ಮನೆ ಈ ರೀತಿ ಹೇಳುತ್ತಾ ಹೋದರೆ ಇದಕ್ಕೇನು ಬೆಲೆ ಬರುತ್ತದೆ ? ಎಲ್ಲ ಅಧಿಕಾರಿಗಳೂ ಕರಪ್ಟ್ ಅಧಿಕಾರಿಗಳು ಎಂದು ತಮ್ಮ ಭಾವನೆಯೋ ?

ಶ್ರೀ ಕೆ. ಎಚ್. ಹನುಮೇಗೌಡ —ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಹುಚ್ಚಮಾಸ್ತಿಗೌಡರ ರೈತರ ಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡವರು. ಅವರೂ ಕೂಡ ರೈತರ ಬಗ್ಗೆ ಏಕೆ ಹೀಗೆ ಮಾಡುತ್ತಾರೋ ಗೊತ್ತಾಗುತ್ತಿಲ್ಲ. ಪ್ರಾಯಶಃ ಇದು ಅವರ ಸಹವಾಸ ದೋಷದಿಂದ ಹಾಗಿರಬಹುದು. ಬೇಕಾದರೆ ನಮ್ಮ ಮುಖ್ಯ ಮಂತ್ರಿಗಳು ಹಾಗೂ ಲೋಕೋಪಯೋಗಿ ಮಂತ್ರಿಗಳು ಸೇರಿಕೊಂಡು ಇಂತಹ

ತಹ ಕಂದಾಯುಗಳನ್ನು ಕೊಡಬೇಕೆಂದು ಪ್ರಕಟ ಮಾಡಿದರೂ ಕೂಡ ತೆರಿಗೆಗಳನ್ನು ಹೆಚ್ಚಾಗಿ ಕಟ್ಟುವವರು ಬಡವರಾದ ರೈತರೇ ಎನ್ನುವುದು ತಮಗೆ ಗೊತ್ತಾಗುತ್ತದೆ. ಶೇಕಡಾ ತೊಂಬತ್ತು ಭಾಗ ರೈತರಿಂದಲೇ ಹೆಚ್ಚು ವರಮಾನ ಸರಕಾರಕ್ಕೆ ಬರುತ್ತದೆ ಇದಕ್ಕಾಗಿ ಈಗಿರುವ ಮಸೂದೆಯನ್ನು ವಾಪಸು ತೆಗೆದುಕೊಂಡು ಇದಕ್ಕೆ ಬೇರೆ ವ್ಯವಸ್ಥೆ ಮಾಡುವುದು ಸೂಕ್ತ ಎಂದು ನಾನು ಹೇಳುತ್ತೇನೆ.

ಶ್ರೀ ಡಿ ದೇವರಾಜ ಅರಸ್.—ಇದರಲ್ಲಿ ಬರುವ ಹಣದಿಂದ ಒಂದು ಪ್ರತ್ಯೇಕವಾದ ಫಂಡನು ಕ್ರಿಯೇಟುಮಾಡಿಇದನ್ನು ಗ್ರಾಮಾಂತರದ ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕೆಂದುತರುತ್ತಿದ್ದೇವೆ. ಇದಕ್ಕೆ ತಾವು ಹಾಗೂ ನಾವು ಎಲ್ಲರೂ ಒಪ್ಪಿದ ಮೇಲೇನೇ ಇಂತಹ ಒಂದು ಬಿಲ್ಲನ್ನು ತಂದಿರುವುದು. ಮೊದಲು ಸರಕಾರವೇ ಬಿಲ್ಲನ್ನು ತರಲಿಲ್ಲಿ ಸರಕಾರದ ಜನರಲ್ ರೆವೆನ್ಯೂ ಫಂಡಿನಿಂದ ರಸ್ತೆ ಕೆಲಸಗಳಿಗಾಗಿ ಹೆಚ್ಚು ಖರ್ಚುಮಾಡಲಗುತ್ತಿರಲಿಲ್ಲ. ಇದಕ್ಕೆ ಕಾರಣ ಬೇರೆ ಯೋಜನೆ ಕೆಲಸಗಳಿಗಾಗಿ ಹೆಚ್ಚು ಖರ್ಚು ಮಾಡಬೇಕಾಗಿ ಬಂದಿದೆ. ಹಣ ಬೇಕು ಎಂದರೆ ಎಲ್ಲಿಂದ ತರುವುದು ? ನೀವುಗಳೆಲ್ಲರೂ ಒಪ್ಪಿದಂತೆ ಸಪರೇಟಾಗಿ ಒಂದು ಫಂಡನ್ನು ರಸ್ತೆ ಕೆಲಸಗಳಿಗಾಗಿಯೇ ಇಲ್ಲಿ ಕ್ರಿಯೇಟು ಮಾಡಬೇಕೆನ್ನುವ ಉದ್ದೇಶದಿಂದ ಇಂತಹ ಒಂದು ಬಿಲ್ಲನ್ನು ತರಲಾಗುತ್ತಿದೆ. ಈ ತರಹದ ಬಿಲ್ಲನ್ನು ಬೇರೆ ಕಡೆಗಳಲ್ಲೂ ಮಾಡಿರುವುದರಿಂದ ನಾವು ಇಲ್ಲಿ ಮಾಡುತ್ತಿದ್ದೇವೆ. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರುವ ರಸ್ತೆಗಳನ್ನು ಅಭಿವೃದ್ಧಿ ಮಾಡಲು ಅನುಕೂಲವಾಗುತ್ತದೆ ಎಂದು ಮಾಡುತ್ತಿದ್ದೇವೆ. Separate fund for the first time is being created, You know how much of general revenne has been spent and how much has to be allotted to what work. Now, the Karnataka Government is in a position to spe nd as much money as possible for its big projects like Hemavathi, Harangi, Kabini and so on and so forthe along Kali project. ಹೊಸದಾಗಿ ಇಂತಹ ಒಂತಹ ಒಂದು ಫಂಡನ್ನು ಇದರ ಮೂಲಕ ಮಾಡಬಹುದು ಎಂದು ಈ ಬಿಲ್ಲನ್ನು ತರುತ್ತಿರುವುದು, ಯಾರ ಮೇಲೂ ತೆರಿಗೆ ಹಾಕದೆ ಸರಕಾರ ಕೆಲಸ ಮಾಡುವುದಕ್ಕಾಗುವುದಿಲ್ಲ.

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಆಧ್ಯಕ್ಷರೇ, ಈ ಬಿಲ್ಲನ್ನು ನಾನು ಸಂಪೂರ್ಣವಾಗಿ ಬೆಂಬಲಿಸುವುದಕ್ಕೆ ಇಚ್ಛಿಸುತ್ತೇನೆ ನಮ್ಮಲ್ಲಿ ಅಕ್ಕಿ ಮೇಲೆ ಆಶೆ, ನೆಂಟರ ಮೇಲೆ ಬಹು ಪ್ರೀತೀ ಎಂದು ಗಾದೆ ಹೇಳುತ್ತಾರೆ. ಮನೆಯಲ್ಲಿ ಅಕ್ಕಿ ಖರ್ಚಾಗಬಾರದು, ಆದರೆ ನೀತಿಯನ್ನು ಬಿಡಬೇಕಾಗುತ್ತದೆ ಕೆಲಸವಾಗಲಿಲ್ಲ. ರಸ್ತೆ ಹಾಳು ಬಿದ್ದು ಕುಗ್ಗುತ್ತಾ ಇದ್ದರೂ ನಮ್ಮ ಸ್ನೇಹಿತರು ಏನೂ ಮಾಡಲಿಲ್ಲ, ಆದಕ್ಕೆ ಒಂದು ದಾರಿಯನ್ನು ಕಂಡುಹಿಡಿದು ಒಂದು ಮಾರ್ಗವನ್ನು ಕಲ್ಪಿಸಬೇಕು ಏಕೆಂದರೆ ಯಾವ ರೈತನನ್ನು ನಾವು ಹಿತರಕ್ಷಣೆ ಮಾಡುವುದಕ್ಕೆ ಹೊರಟಿದ್ದೇವೆಂಬುದನ್ನು ಹೇಳಲಿ. ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗೆ ಬರುವ ರೈತ ಯಾರು ? ಇಸ್ತ್ರಿ ಬಟ್ಟೆ ಹಾಕಿರತಕ್ಕ ರೈತ ಬರುತ್ತಾನೆಯೇ ? ಒಬ್ಬ ಸಾಮಾನ್ಯ ರೈತ ವ್ಯಾಪಾರಮಾಡುವುದು ನಮ್ಮ ಜಿಲ್ಲೆಯಲ್ಲಿಯೇ ಅಲ್ಲ. ರೆಗ್ಯುಲೇಟೆಡ್ ಮಾರ್ಕೆಟ್‌ಕಮಿಟ ಯಾವ ಕಡೆ ಇದೆಯೆಂದು ಸಣ್ಣಪುಟ್ಟ ರೈತರು ನೋಡುವುದೇ ಇಲ್ಲ ಅಲ್ಲಿಗೆ ಯಾರು ಬರುತ್ತಾರೆಂದರೆ ಕೇವಲ ದೊಡ್ಡ ದೊಡ್ಡ ರೈತರು ಬರುತ್ತಾರೆ. ಆದರೆ ಸಣ್ಣಪುಟ್ಟ ರೈತರಿಗೆ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯೊಳಗೆ ತಾನು ಬೆಳೆದಂಥ ಸಾಮಾನುಗಳನು ತರುವುದಕ್ಕೆ ಎಲ್ಲಿ ಸಾಧ್ಯ ? ಎಷ್ಟೋ ಜನ ರೈತರಿಗೆ ಅವರ ಬೆಳವಳಿಗೆಗಾಗಿ ಸಾಕಾಗುತ್ತದೆ. ಇನ್ನು ಮಿಕ್ಕಿದ್ದು ಉಳಿದರೆ ಅದನ್ನು ದೊಡ್ಡದೊಡ್ಡ ರೈತರಿಗೆ ಕೊಡುತ್ತಾರೆ. ಅವನು ಸಿಟಿಗೆ ಬಂದು ರೆಗ್ಯುಲೇಟೆಡ್ ಮಾರ್ಕೆಟೆಡ್ ಕಮಿಟಿಯ ಮುಂದೆ ವ್ಯಾಪಾರ ಮಾಡುವ ಪರಿಸ್ಥಿತಿ ಎಲ್ಲಿದೆ ? ಪದಾರ್ಥಗಳನ್ನು ಕೊಳ್ಳುವವರಿಗೆ ತೆಗೆದು ಕೊಳ್ಳುವವರಿಗೆ ಅದರಲ್ಲಿಯೂ ದೊಡ್ಡ ದೊಡ್ಡ ರೈತರಿಗೆ ಹೆಚ್ಚು ಟ್ಯಾಕ್ಸ್ ಬೀಳುತ್ತದೆ. ಅವರ ಮೇಲೆ ತೆರಿಗೆ ಬೀಳುವುದರಿಂದ ಅದನ್ನು ಹಾಗಬಾರದೆಂಬುದೇ ಈಗಿರತಕ್ಕವಾದ. ನಮ್ಮ ಸ್ನೇಹಿತರದೂ ಸಹ ಅದೇ ವಾದವಾದರೆ ಇನ್ನು ಕೆಲಸಮಾಡುವುದು ಹೇಗೆ ? ಮಾನ್ಯ ಶ್ರೀ ಚನ್ನಬಸಪ್ಪನವರು ಹಳ್ಳಿಗಾಡಿನ ರೈತರಿಗೆ ಬೇರೆ ಒಂದು ಶಾಸನವನ್ನು ತರುತ್ತೇವೆ. ಆದಕ್ಕಾಗಿ ಒಂದು ಪ್ರತ್ಯೇಕ ನೀತಿಯನ್ನು ಇಡಲಿಕ್ಕೆ ಪ್ರಯತ್ನಮಾಡುತ್ತೇನೆಂದು ಹೇಳಿದ ಮಾತನ್ನು ಮೊದಲೇ ತಿಳಿಸಿದರು. ಅಂತಹ ಒಂದು ದಿಟ್ಟ ಹೆಜ್ಜೆಯನ್ನು ಇಡಲಾಗಿದೆ ಆದನ್ನು ನಾನು ಮೆಚ್ಚಬೇಕೇ ಹೊರತು ಅದರ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಿದರೆ ಅದಕ್ಕೆ ಇತಿಮಿತಿ ಇಲ್ಲ. ಆದರೆ ಒಂದು ಪ್ರಶ್ನೆ. ಇದರ ಸಾಧಕಬಾಧಕಗಳನ್ನು ವಿಚಾರಮಾಡುವುದು ನಮ್ಮ ಕರ್ತವ್ಯ. ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಲ್ಲಿ ನಾನೂ ಒಬ್ಬ ಯಾವುದೇ ಬಿಲ್ಲನ್ನು ಇಲ್ಲಿ ಪಾಸ್ ಮಾಡುವಾಗ ಅದರಿಂದ ಯಾವುದಾದರೂ ಒಂದು ವರ್ಗಕ್ಕೆ ಅನುಕೂಲವಾಗುವಂತೆ ಮಾಡುವುದು ಸರಿಯಲ್ಲ. ಆ ರೀತಿಯಾಗಿ ಬಿಲ್ ತಂದರೆ ಬಹಳ ತಪ್ಪು. ರೈತರಿಂದ ಸುಲಿಗೆ ನಡೆಯುತ್ತಿದೆ, ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯವರು ಗೂಂಡಾಗಳು ಸಮಾಜ

ವನ್ನು ಲೂಟಿ ಮಾಡಿರುವ ಜನರು ಎಂಬುದಾಗಿ ಮಾನ್ಯ ಶ್ರೀ ಹನುಮೇಗೌಡರು ಹೇಳುವಂಥಾದ್ದನ್ನು ನಾನು ಒಪ್ಪುವುದಿಲ್ಲ. ಈ ಕಮಿಟಿ ಬಂದದ್ದರಿಂದ ಜನರಿಗೆ ಯಾವರೀತಿಯಲ್ಲಿ ಅನುಕೂಲಗಳನ್ನು ಸರ್ಕಾರಿ ಕಲ್ಪಿಸಿ ಕೊಡುತ್ತಿದೆ ಎಂಬದನ್ನು ನೋಡಬೇಕು. ಬಂಡವಾಳಷಾಹಿಗಳು ಮುಸುಕಿನಲ್ಲಿ ಬಟ್ಟೆ ಮುಚ್ಚಿ ಕೊಂಡು ಯಾರಿಗೂ ಗೊತ್ತಿಲ್ಲದ ಹಾಗೆ, ಯಾವಾಗ ಏನಾಗುತ್ತವೆ.ಹೇಗೆ ವ್ಯಾಪಾರಗಳನ್ನು ಹಿಂದೆ. ನಡೆಸು ತ್ತಿದ್ದರೆಂಬುದನ್ನು ನಾವು ನೋಡಿರಬಹುದು. ಈ ರೀತಿಯಾಗಿ ಮುಸುಕಿನ ವ್ಯಾಪಾರ ನಡೆಯುತ್ತಿತ್ತು ಇವತ್ತು ಮಾಡಿರತಕ್ಕ ಕಾನೂನನ್ನು ಅಷ್ಟು ಲಘುವಾಗಿ ಟೀಕೆ ಮಾಡುವುದು ಸರಿಯಲ್ಲ. ಅದರಲ್ಲಿ ಯಾವುದೇ ಸಂಸ್ಥೆ ಯಾಗಲಿ ಒಳ್ಳೆಯವರೂ ಸಹ ಇರುತ್ತಾರೆ. ಕೆಟ್ಟವರೂ ಸಹ ಇರುತ್ತಾರೆ. ಯಾವುದೋ ಒಂದು ಮನೆಯಲ್ಲಿ ಇಲಿ ಇರುತ್ತದೆ, ಹೆಗ್ಗಣಗಳು ಇರುತ್ತವೆಂದು ಆ ಮನೆಗೆ ಬಾಂಬ್ ಹಾಕುವುದು ಸರಿಯಲ್ಲ. ಅದರ ಬಗ್ಗೆ ನಾವು ಯೋಚನೆಮಾಡಬೇಕಾದುದು ಇದೆ. ಇವತ್ತು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿ ಇಲ್ಲದೇ ಹೋದರೆ ರೈತರ ಪರಿಸ್ಥಿತಿ ಇನ್ನೂ ಬಹಳವಾಗಿ ಕೆಡುತ್ತಿತ್ತು. ಇದು ಸಮಾಜವಾದ ಮಿತ್ರರಿಗೆ ಗೊತ್ತಿದೆ. ಒಬ್ಬ ಬಡಪಾಯಿ ರೈತ ಕೇವಲ ೧೦೦ ರೂಪಾಯಿಗಳ ಸಾಲವನ್ನು ತೆಗೆದುಕೊಂಡರೆ ಅವನು ಒಂದು ಪಲ್ಲಾ ಬತ್ತವನ್ನು ಬಡ್ಡಿಯಾಗ ಕೊಡಬೇಕಾಗುತ್ತದೆ. ಆ ರೀತಿಯಾಗಿ ರೈತರನ್ನು ಶೋಷಣೆ ಮಾಡುವ ಪದ್ಧತಿ ಸಮಾಜದಲ್ಲಿ ರೂಡಮೂಲವಾಗಿ ಬಂದಿರುವುದನ್ನು ನಾವೆಲ್ಲರೂ ಕಂಡಿ ದ್ದೇವೆ. ಅದರಲ್ಲಿರತಕ್ಕ ನ್ಯೂನತೆಯನ್ನು ತಿದ್ದಬೇಕು. ಆ ರೀತಿ ಮಾಡದೆ ಅಂತಹ ನ್ಯೂನತೆಗಳನ್ನು ದೊಡ್ಡದುಮಾಡಿಕೊಂಡು ಹೋಗಿ ಅಂತಹ ಸಂಸ್ಥೆಗಳನ್ನು ನಿರ್ಮೂಲಮಾಡದೇ ಇರುವ ನೀತಿ ಸರಿಯಲ್ಲ ನಿಜವಾಗಿಯೂ ಸಮಾಜವಾದ ಪದ್ಧತಿಯನ್ನು ನಾವು ಒಪ್ಪಬೇಕಾದರೆ ಇಂತ ನಿಯಂತ್ರಣ ವಿರುವ ಸಂಸ್ಥೆಗಳನ್ನು ಮೊದಲು ಬೆಳೆಸಬೇಕು. ಅವನ್ನು ತೆಗೆಯುವ ರೀತಿನೀತಿ ಸರಯಾಗಿಲ್ಲ. ಅದನ್ನು ಯಾರೂ ಒಪ್ಪುವುಲ್ಲ. ಅದನ್ನು ಯಾರೂ ಒಪ್ಪುವುದಿಲ್ಲ ರೈತರನ್ನು ಶೋಷಣೆ ಮಾಡುವುದು ಸರಿಯಲ್ಲ. ಸಮಾಜದಲ್ಲಿ ಸಾಮಾಜಿಕ ನಿಯಂತ್ರಣವನ್ನು ತರಬೇಕು. ರೈತರನ್ನು ಸುಲಿಗೆ ಮಾಡುವ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುವುದನ್ನು ಯಾರೂ ಒಪ್ಪುವುದಿಲ್ಲ. ಈ ಒಂದು ದೃಷ್ಟಿಯಿಂದ ಇವತ್ತು ನಾನು ಊರಿಗೆ ಹೋಗುವಾಗ ನಿನ್ನೆತಾನೇ ಮಾತನಾಡಿದ್ದೇನೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಎಷ್ಟು ಕಾಮಗಾರಿ ಗಳು ಆಗಬೇಕಾಗಿತ್ತು ಅದನ್ನು ಮಾಡಿಲ್ಲ. ಕಳೆದ ಶಾಸನಸಭೆಯಲ್ಲಿ ನನ್ನ ಕ್ಷೇತ್ರದಲ್ಲಿ ೮೦ ಕಿಲೋಮಿಟರ್ ರಸ್ತೆ ಯನ್ನು ಮಾಡಿಸುತ್ತೇನೆಂದು ಲೋಕೋಪಯೋಗಿ ಮಂತ್ರಿಗಳು ಆಶ್ವಾಸನೆಕೊಟ್ಟು ಈಗ ಹಣವಿಲ್ಲದೆ ಆ ಕೆಲಸವಾಗಿಲ್ಲವೆಂದು ಹೇಳುತ್ತಿದ್ದಾರೆ. ಇದು ಸರಿಯಲ್ಲ. ನಾವೇನು ಇನ್ನು ಎರಡು ವರ್ಷಗಳಲ್ಲಿ ಕೆಲಸಗಳನ್ನು ಮಾಡಬೇಕೋ ಅವನ್ನು ಮುಗಿಸಲು ನಮಗೆ ಹೆಚ್ಚಿಗೆ ಹಣಸಹಾಯ ಬೇಕು. ಅದರ ಬಗ್ಗೆ ಸರ್ಕಾರ ನಿಗಾ ವಹಿಸಿ ಕೂಡಲೇ ಆ ಕಾರ್ಯಗಳನ್ನು ಪೂರ್ತಿಯಾಗಿ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಇಂತಹ ಬಿಲ್ಲಿಗೆ ನಾನು ವಿರೋಧಮಾಡಬಾರದೆಂದು ಬೆಂಬಲಕೊಟ್ಟು ಮಾತನಾಡಿದ್ದೇನೆ. ಸರ್ಕಾರ ತಾನು ಆಶ್ವಾಸನೆಕೊಟ್ಟಿರುವ ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲ ಕೆಲಸಕಾರ್ಯಗಳನ್ನು ಮಾಡಿ ಜನರಿಗೆ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದಾರೆಂಬುದನ್ನು ತೋರ್ಪಡಿಸಿ ಕೊಡಬೇಕೆಂದು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವರಿಗೆ ಒಂದು ಮಂತ್ರಿಸ್ಥಾನವನ್ನಾದರೂ ಕೊಡಿ.

† ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ).— ಮಾನ ಅಧ್ಯಕ್ಷಣಿಯವರೇ, ಮಾನ್ಯ ಮಂತ್ರಿಗಳು ತಂದಿರತಕ್ಕ ಈ ಬಿಲ್ಲಿಗೆ ನನ್ನ ಸಂಪೂರ್ಣವಾದಂಥ ಬೆಂಬಲವನು ಸೂಚಿಸುತ್ತಾ, ನಾವೇ ಈ ಸದನಲ್ಲಿ ಅನೇಕ ಸಾರಿ ಸರ್ಕಾರಕ್ಕೆ ಒತ್ತಾಯಮಾಡಿದ್ದೇವೆ. ಹಳ್ಳಿಗಾಡಿನಲ್ಲಿ ರಸ್ತೆಗಳು ಆಗಬೇಕು. ಸಂಪರ್ಕ ನೌಕರ್ಯ ಬಹಳ ಕಡಿಮೆ, ಇದರಿಂದ ಅವರಿಗೆ ಬಹಳ ತೊಂದರೆ ಇದೆ ಎಂಬುದಾಗಿ ಮಾನ್ಯ ವಿರೋಧಪಕ್ಷದ ಸದಸ್ಯರೂ ಕೂಡ ಹೇಳಿದ್ದಾರೆ. ಅವರ ಜೊತೆಗೂಡಿ ನಾವೂ ಸಹ ಅನೇಕ ಸಾರಿ ಈ ಮನೆಯಲ್ಲಿ ಹೇಳಿದ್ದು ಉಂಟು. ಆಬಗ್ಗೆ ಸರ್ಕಾರ ಲಕ್ಷ್ಯವನ್ನು ಕಳೆದು ಎಲ್ಲರ ಮಾತಿಗೆ ಬೆಂಬಲವನ್ನು ಕೊಟ್ಟು ಮಾನ್ಯ ಮಂತ್ರಿಗಳು ಹೆಚ್ಚಿಗೆ ಹಣವನ್ನು ಶೇಖರಣೆ ಮಾಡುವ ದೆಸೆಯಲ್ಲಿ ಈ ಬಿಲ್ಲನ್ನು ತಂದಿದ್ದಾರೆ.ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಯ ಮೂಲಕ ಶೇಕಡ ಒಂದರಷ್ಟು ಹಣವನ್ನು ಶೇಖರಣೆ ಮಾಡುವುದರ ಮೂಲಕ ಇವತ್ತು ಎರಡು ಕೋಟಿ ರೂಪಾಯಿಗಳ ಮೇಲೆ ಹಣವನ್ನು ಶೇಖರಣೆಮಾಡುವ ಸಂದರ್ಭವೂ ಉಂಟು. ಸರ್ಕಾರದ ಒಂದು ಪ್ರಯತ್ನವನ್ನು ನಾವೆಲ್ಲರೂ ಮೆಚ್ಚತಕ್ಕದ್ದಾಗಿದೆ. ಆ ಒಂದು ಪ್ರಯತ್ನದಲ್ಲಿ ಸರ್ಕಾರ ಬಹಳ ದೂರದೃಷ್ಟಿ ಯನ್ನುಳ್ಳಂಥ ಒಂದು ಮಸೂದೆಯನ್ನು ತಂದಿದೆ. ಅದಕ್ಕೆ ನಮ್ಮೆಲ್ಲರ ಸ್ವಾಗತ ಉಂಟು. ಬೆಂಬಲ ಉಂಟು ಆ ಬಗ್ಗೆ ಮತ್ತೆ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವುದು ಏನೂ ಇಲ್ಲವೆಂದು ನಾನು

ಹೇಳುತ್ತಿದ್ದೇನೆ. ಇದು ಬಹಳ ಸರಳವಾದ ಮಸೂದೆ. ಇದರಲ್ಲಿ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದು ಅನಾವಶ್ಯಕವೆಂದು ನಾನು ಹೇಳುತ್ತೇನೆ ಆದ್ದರಿಂದ ಈ ಮಸೂದೆಯನ್ನು ನಾವೆಲ್ಲರೂ ಒಮ್ಮತವಾಗಿ ಪಾಸ್ ಮಾಡಿ ಹಳ್ಳಿಗಾಡಿನ ಜನರಿಗೆ ರಸ್ತೆಗಳನ್ನು ಒದಗಿಸುವ ದೆಸೆಯಲ್ಲಿ ನಾವೆಲ್ಲರೂ ಸರ್ಕಾರಕ್ಕೆ ಪೂರ್ಣ ಬೆಂಬಲವನ್ನು ಕೊಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

† ಹೆಚ್.ಎಂ. ಚನ್ನಬಸಪ್ಪ.— ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಮಂಡನೆ ಮಾಡುವಾಗ ಇದರ ಉದ್ದೇಶವೇನು ಎನ್ನುವುದನ್ನು ಮೊದಲೇ ಹೇಳಿದ್ದೇನೆ. ಸಾಮಾನ್ಯವಾಗಿ ಹಳ್ಳಿಗಾಡಿನ ಜನರಿಗೆ ಮುಖ್ಯವಾಗಿ ಬೇಕಾಗಿರುವುದು ಓಡಾಡಲು ರಸ್ತೆ, ಒಂದು ಸ್ಕೂಲು ಹಾಗೂ ಒಂದು ಆಸ್ಪತ್ರೆ ಮತ್ತು ಕುಡಿಯುವ ನೀರಿನ ಸೌಕರ್ಯಕ್ಕಾಗಿ ಒಂದು ಬಾವಿ ಇರಬೇಕು. ಇವುಗಳು ಇಲ್ಲದಿದ್ದರೆ ಗ್ರಾಮಾಂತರದಲ್ಲಿರುವ ಜನರಿಗೆ ಅನುಕೂಲವಾಗುವುದಿಲ್ಲ ಎನ್ನುವುದನ್ನು ನಾನು ಹಾಗೂ ನೀವು ಎಲ್ಲರೂ ಒಪ್ಪುತ್ತೀರಿ. ಹಳ್ಳಿಗಾಡಿನ ರಸ್ತೆಗೋಸ್ಕರವಾಗಿ ಸುಮಾರು ಹದಿನಾಲ್ಕು ವರ್ಷಗಳ ಹಿಂದೆಯೇ ಒಂದು ಸ್ಕೀಂನ್ನು ಮಾಡಲಾಗಿತ್ತು ಆದರೆ ಆ ಸ್ಕೀಂ ಕೆಲವು ಕಾಲ ನಡೆಯಿತು. ಮತ್ತೆ ಕೆಲವು ಕಾಲಾನಂತರ ಅದು ನಿಂತು ಹೋಯಿತು. ಪುನಃ ಹೋದ ವರ್ಷ ಹಳ್ಳಿಗಾಡಿನ ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕು ಎಂದು ಸರಕಾರ ಏರ್ಪಾಡು ಮಾಡಿಕೊಂಡು ಅದಕ್ಕೆ ತಕ್ಕಂತೆ ಪ್ರಕಟಣೆಯನ್ನೂ ಹೊರಡಿಸಲಾಗಿತ್ತು, ಅದರಂತೆ ಇದಕ್ಕಾಗಿ ಸ್ವಲ್ಪ ದುಡ್ಡನ್ನೂ ಪ್ರತ್ಯೇಕವಾಗಿ ನಿಗದಿ ಮಾಡಲಾಗಿತ್ತು. ಸುಮಾರು ೫೦ ಮೈಲಿಗಳಷ್ಟು ರಸ್ತೆಗಳನ್ನು ಮಾಡಬೇಕೆಂದು ಕಾರ್ಯವನ್ನು ಆರಂಭ ಮಾಡಲಾಗಿತ್ತು. ಆದರೆ ಹಣಕಾಸಿನ ಕೊರತೆಯಿಂದಾಗಿ ಹಳ್ಳಿಗಾಡಿನ ರಸ್ತೆಗಳು ಪೂರ್ತಿಯಾಗಿ ಮಾಡಲಾಗದೆ ಸ್ವಲ್ಪ ಮಟ್ಟಿಗೆ ಕುಂಠಿತವಾಯಿತು ಎನ್ನುವುದು ಸಾರ್ವಜನಿಕರೆಲ್ಲರಿಗೂ ಗೊತ್ತಿದೆ. ಬಡ್ಜೆಟ್ಟಿನಲ್ಲಿ ರೂರಲ್ ರೋಡ್ಸ್ ಎನ್ನುವ ಹೆಡ್‌ನಲ್ಲಿ ಸ್ವಲ್ಪ ಹಣ ಒದಗಿಸಿದ್ದರೂ ಕೂಡ ಇದರಿಂದ ಎಲ್ಲ ರಸ್ತೆಗಳ ಕೆಲಸಗಳನ್ನೂ ಪೂರ್ಣ ಮಾಡಲಾಗಲಿಲ್ಲ. ಇದಕ್ಕೆ ಕಾರಣ ದೊಡ್ಡ ದೊಡ್ಡ ಯೋಜನೆಗಳನ್ನು ಸರಕಾರ ಮಾಡಬೇಕೆಂದು ನಿರ್ಧಾರ ಮಾಡಿದ್ದುದರಿಂದ ರಸ್ತೆಗಳನ್ನು ದುರಸ್ತು ಮಾಡಿ ಅವುಗಳನ್ನು ಪೂರೈಕೆ ಮಾಡಲು ಸಾಧ್ಯವಾಗಲಿಲ್ಲ. ಮತ್ತು ಸರಕಾರದಲ್ಲಿ ಬೇರೆ ಯಾವ ರೀತಿಯಾದ ಸರ್‌ಪ್ಲಸ್ ಫಂಡುಗಳೂ ಇರಲಿಲ್ಲ. ಹೀಗಾದರೆ ರಸ್ತೆಗಳನ್ನು ಹೇಗೆ ಸರಿಪಡಿಸುವುದು ? ಸರಕಾರ ತಮ್ಮ ಆಡಳಿತದಲ್ಲಿರುವ ರಸ್ತೆಗಳನ್ನು ಸರ್ವಿಸ್ ಮಾಡದೇ ಹೋದರೆ ರಸ್ತೆ ಕೆಟ್ಟುಹೋಗುತ್ತದೆ ಮತ್ತು ಎಲ್ಲ ಸದಸ್ಯರೂ ಕೂಡ ಹಳ್ಳಿಗಾಡಿನ ರಸ್ತೆಗಳು ಕೆಟ್ಟುಹೋಗುತ್ತಿವೆ ಇದಕ್ಕೇನಾದರೂ ಪರಿಹಾರ ಕಂಡುಹಿಡಿದು ರಸ್ತೆಗಳನ್ನು ಹೇಗಾದರೂ ಮಾಡಿ ಸರಿಪಡಿಸಬೇಕೆಂದು ಒತ್ತಾಯ ಮಾಡುತ್ತಿದ್ದರು. ಮತ್ತು ಇದಕ್ಕೆ ಮಾನ್ಯ ಸದಸ್ಯರು ಎಲ್ಲರೂ ಒಂದೇ ಮಾತಿನಲ್ಲಿ ಕಾನೂನು ಚೌಕಟ್ಟಿನಲ್ಲಿ ಇದಕ್ಕೇನಾದರೂ ಮಾಡಬೇಕು ಎಂದು ಹೇಳಿದ್ದರ ಮೇಲೆ ಮತ್ತು ಮಾರ್ಕೆಟ್ಟು ಕಮಿಟಿಗಳಲ್ಲಿ ಬರುವ ಜನರ ಮೇಲೆ ಸ್ವಲ್ಪ ತೆರಿಗೆ ಹಾಕಿ ಅದರಿಂದ ಬರುವ ಹಣವನ್ನು ಬೇರೆ ಒಂದು ರೀತಿಯಾದ ಫಂಡನ್ನು ಮಾಡಿದರೆ ಆ ಹಣದಿಂದ ರಸ್ತೆಗಳನ್ನು ದುರಸ್ತು ಮಾಡಬಹುದು ಎಂದು ಈ ಪಕ್ಷದ ಸದಸ್ಯರು ಹಾಗೂ ಎದುರುಪಕ್ಷದ ಸದಸ್ಯರುಗಳು ಸಲಹೆ ಮಾಡಿರುವುದರಿಂದ ಅದರಂತೆ ಇಲ್ಲಿ ಒಂದು ಮಸೂದೆ ತರಲಾಗಿದೆ, ಇದರಿಂದ ಪ್ರತಿವರ್ಷವೂ ಹಳ್ಳಿಗಾಡಿನ ರಸ್ತೆಗಳನ್ನು ಸರಿಮಾಡುವುದರ ಜೊತೆಗೆ ಇದರ ಮೇಂಟೆನೆನ್ಸ್‌ನ್ನು ಕೂಡ ಆಯಾ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ನೋಡಿಕೊಳ್ಳಬಹುದು ಎಂದು ಇಂತಹ ಒಂದು ಮಸೂದೆ ತರಲು ಯತ್ನ ಮಾಡಲಾಗಿದೆ. ಇದರಿಂದ ಹಣ ಬರುತ್ತದೆ ಮತ್ತು ರಸ್ತೆ ಕೆಲಸಗಳು ಸಾರೋದ್ಧಾರವಾಗಿ ನಡೆಯಲೂ ಇದರಿಂದ ಸಹಾಯವಾಗುತ್ತದೆ ಮತ್ತು ಇದರಿಂದ ಬೇರೆ ಯಾವ ಯೋಜನೆಗೂ ತೊಂದರೆಯಾಗುವುದಿಲ್ಲ. ಎಂದು ಇಲ್ಲಿ ಈ ಮಸೂದೆಯನ್ನು ತರಲಾಗಿದೆ. ಬಡ್ಜೆಟ್ಟಿನಲ್ಲಿ ಇದಕ್ಕಾಗಿಯೇ ಪ್ರತ್ಯೇಕವಾಗಿ ಹೆಚ್ಚು ಹಣ ಒದಗಿಸುವುದಕ್ಕೂ ಸಾಧ್ಯವಿಲ್ಲ. ರಸ್ತೆಗಳು ಕೆಟ್ಟುಹೋಗುತ್ತಿರುವುದರಿಂದ ಇದನ್ನು ದುರಸ್ತು ಮಾಡಲು ಏನಾದರೂ ಒಂದು ರೀತಿಯಾದ ಪರಿಹಾರವನ್ನು ಮಾಡಬೇಕೆಂದು ಎಲ್ಲ ಸದಸ್ಯರುಗಳೂ ಆಗಿಂದಾಗ್ಗೆ ಇಲ್ಲಿ ಸಲಹೆ ಮಾಡುತ್ತಿದ್ದರು ಮತ್ತು ಇದರ ಬಗ್ಗೆ ಅನೇಕ ರೀತಿಯಾದ ಸಲಹೆಗಳನ್ನೂ ಸರಕಾರಕ್ಕೆ ಕೊಡುತ್ತಿದ್ದರು ಮತ್ತು ಪ್ರತ್ಯೇಕವಾದ ಒಂದು ಫಂಡನ್ನು ರಸ್ತೆಗಳಿಗಾಗಿಯೇ ಇಡದೇ ಹೋದರೆ ಹಳ್ಳಿಗಾಡಿನ ರಸ್ತೆಗಳು ಉದ್ಧಾರವಾಗುವುದಿಲ್ಲ ಇದಕ್ಕೆ ಬಡ್ಜೆಟ್ಟಿನಿಂದ ಹೊರಗೆ ಫಂಡನ್ನು ಇಡಬೇಕಾದರೆ ಎಲ್ಲ ಕಡೆಗಳಲ್ಲೂ ಇರುವ ರೆಗ್ಯುಲೇಟೆಡ್ ಮಾರ್ಕೆಟ್ಟು ಕಮಿಟಿಗಳಲ್ಲಿ ಜನರು ವ್ಯವಹಾರಕ್ಕೆ ಬರುತ್ತಿರುವುದರಿಂದ ಇವರ ಮೇಲೆ ಸ್ವಲ್ಪ ಹೆಚ್ಚಿನ ರೀತಿಯಾದ ಕರವನ್ನು ಹಾಕಿದರೆ ಸ್ವಲ್ಪ ಹೆಚ್ಚು ಹಣ ಬರುತ್ತದೆ ಮತ್ತು ಆ ರೀತಿ ಬಂದ ಹಣದಿಂದ ಪ್ರತ್ಯೇಕವಾಗಿ ಒಂದು ಫಂಡ್ ಮಾಡಬೇಕು ಎಂದು ಯೋಚನೆ ಮಾಡಿ ಇಂತಹ ಒಂದು ಬಿಲ್ಲನ್ನು ಈಗ ತರಲಾಗಿದೆ. ಇದರ ಮುಖ್ಯ ಉದ್ದೇಶ ಹಳ್ಳಿಗಾಡಿನಲ್ಲಿರುವ ರಸ್ತೆಗಳ ದುರಸ್ತಿಗಾಗಿ ಇದರಿಂದಲೇ ಸಾಕಷ್ಟು ಹಣವನ್ನು ತೆಗೆದುಕೊಂಡು ಉಪಯೋಗ ಮಾಡಿದರೆ ಹೆಚ್ಚು ರಸ್ತೆ ಕೆಲಸಗಳನ್ನು ಮಾಡಲು ಸಹಾಯವಾಗುತ್ತದೆ ಎಂದು ಮಾಡಲಾಗಿದೆ ಮತ್ತು ಶೇಕಡಾ ತೊಂಬತ್ತರಷ್ಟು ರಸ್ತೆಗಳು ಕೆಟ್ಟುಹೋಗುವುದನ್ನು ತಪ್ಪಿಸಬಹುದು. ಮತ್ತು ಸರಕಾರದವರು ಅನೇಕರೀತಿಯ ತೆರಿಗೆಗಳನ್ನು ಹಾಕಿ

ದ್ದಾರೆ ಇದರಿಂದ ಸುಮಾರು ೩೫ ರಿಂದ ೧೦ ಕೋಟಿ ರೂಪಾಯಿಯವರೆಗೆ ವರಮಾನ ಬರುತ್ತಿದೆ, ಇದನ್ನು ಏಕೆ ಉಪಯೋಗ ಮಾಡಬಾರದು ಎಂದು ಸಲಹೆ ಮಾಡಿದ್ದಾರೆ. ಆದರೆ ಬಡ್ಜೆಟ್ಟಿನಲ್ಲಿ ಹೆಚ್ಚು ಹಣ ಒದಗಿಸುವುದಕ್ಕೆ ಆಗುತ್ತಿಲ್ಲ. ಆದುದರಿಂದ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯನ್ನು ಒಂದು ರೀತಿಯಾದ ಸ್ವತಂತ್ರವಾದ ತಳಹದಿಯ ಮೇಲೆ ಮಾಡಿದರೆ ಅದರಿಂದ ಹಳ್ಳಿಗಾಡಿನ ಜನರಿಗೆ ಅನುಕೂಲವಾಗುತ್ತದೆ ಎಂದು ಮತ್ತು ಹಲವಾರು ಸದಸ್ಯರು ಮಾಡಿರುವ ಸಲಹೆಗಳನ್ನೂ ಗಮನದಲ್ಲಿಟ್ಟುಕೊಂಡು ಇಂತಹ ಒಂದು ಮಸೂದೆ ತರಲಾಗಿದೆ. ಇದಕ್ಕಾಗಿ ಮಾನ್ಯ ಸದಸ್ಯರು ಸರ್ವಾನುಮತದಿಂದ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ. ಇದೇ ನನ್ನ ಕೋರಿಕೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರಕಾರದವರು ಇಲ್ಲಿ ಒಂದು ಪ್ರತ್ಯೇಕವಾದ ಫಂಡು ಕ್ರಿಯೇಟು ಮಾಡುತ್ತಿರುವುದರಿಂದ ಇದಕ್ಕೆ ಸರಕಾರ ಮ್ಯಾಚಿಂಗು ಗ್ರಾಂಟು ಎಂದೇಕೆ ಕೊಡಬಾರದು ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಸರಕಾರ ಇದಕ್ಕೆ ಹಣ ಒದಗಿಸುವುದಕ್ಕೆ ಹಣ ಅವರಲ್ಲಿದ್ದರೆ ಅದಕ್ಕೆ ಅಡ್ಡಿ ಏನೂ ಇಲ್ಲ.

ಶ್ರೀ ಡಿ ದೇವರಾಜ ಅರಸ್.—ಅಷ್ಟು ಹಣ ಇಲ್ಲ ಎಂದರೂ ಖರ್ಚು ಮಾಡುತ್ತಿದ್ದೇವೆ. ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಮಾಡಬೇಕೆಂದು ಕೆಲಸಗಳನ್ನು ಮಾಡುತ್ತಿರುವಾಗ ಅದಕ್ಕೆ ಖರ್ಚು ಮಾಡದೇ ಇರುವುದಕ್ಕಾಗುತ್ತದೆಯೇ ? ಮೈನರು ಇರಿಗೇಷನ್ ಕೆಲಸಗಳಿಗೆ ಹಾಗು ಇನ್ನಿತರ ಕೆಲಸಗಳಿಗೆ ಒಂದುರೀತಿಯಾದ ರಿವಾಲ್ವಿಂಗ್ ಫಂಡು ಎಂದು ಮಾಡುತ್ತಿದ್ದೇವೆ. ಇದರಿಂದ ಸುಮಾರು ೩-೪ ಕೋಟಿ ರೂಪಾಯಿ ಬರಬಹುದು ಕನ್‌ಸಾಲಿಡೇಟೆಡ್ ಫಂಡಿನಿಂದ ಇದಕ್ಕೆ ಪ್ರತ್ಯೇಕವಾಗಿ ಇಯರು ಮಾರ್ಕು ಮಾಡಲಾಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಸರಕಾರದವರು ರೋಡ್ ಫಂಡಿಗಾಗಿ ಸ್ವಲ್ಪ ಹಣವನ್ನು ಪ್ರತಿ ವರ್ಷವೂ ಒದಗಿಸುತ್ತ ಬರುತ್ತಿದ್ದಾರೆ. ಹಳ್ಳಿಗಾಡಿನ ರಸ್ತೆಗಳನ್ನು ಅಭಿವೃದ್ಧಿ ಮಾಡಲು ಈಗ ಪ್ರತ್ಯೇಕವಾಗಿ ಒಂದು ಫಂಡನ್ನು ಮಾಡುತ್ತಿರುವಾಗ ಇದರ ಜೊತೆಗೆ ಇಂತಿಷ್ಟು ಹಣವನ್ನು ಸರಕಾರ ವರ್ಷ ವರ್ಷವೂ ಒದಗಿಸಬಹುದು ಎಂದು ಮಾಡಬಹುದಲ್ಲವೇ ? ಇದಕ್ಕೆ ಸರಕಾರ ಹೆಚ್ಚು ಹಣ ಸೇರಿಸಿದಂತಾಗುತ್ತದೆ ಮತ್ತು ರಸ್ತೆ ಕೆಲಸಗಳನ್ನು ಚೆನ್ನಾಗಿ ಮಾಡಲು ಸಹಾಯವಾಗುತ್ತದೆ. ರೆಗ್ಯುಲೇಟೆಡ್ ಮಾರ್ಕೆಟ್ಟು ಕಮಿಟಿಗಳಿಂದ ಬರುವ ಹಣವೇ ಸಾಕಾಗುವುದಿಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಸರಕಾರ ಇದಕ್ಕೆ ಹಣ ಸೇರಿಸುವುದಕ್ಕೆ ಅಡ್ಡಿ ಏನಿಲ್ಲ. ಇದರಿಂದ ನಮಗೆ ಮೂರು ಇಲ್ಲವೇ ಮೂರುವರೆ ಕೋಟಿ ರೂಪಾಯಿಗಳು ಬರುತ್ತದೆ. ಇದು ಸಾಲದು ಎಂದರೆ ಇದಕ್ಕೆ ಸರಕಾರ ಇನ್ನೂ ಹೆಚ್ಚು ಹಣ ಬೇಕಾದರೂ ಕೊಡಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ನಾವು ಇದನ್ನು ಒಂದು ತತ್ವಕ್ಕಾಗಿ ವಿರೋಧ ಮಾಡುತ್ತಿರುವುದು ಹಿಂದೆ ಷುಗರ್ ಕೇನ್ ಸೆಸ್ ಎಂದು ಹಾಕಿ ಅದನ್ನು ಸರಕಾರ ವಸೂಲು ಮಾಡುವಾಗ ಸಕ್ಕರೆ ಕಾರ್ಖಾನೆ ಬಳಿ ಇರುವ ರಸ್ತೆಗಳಿಗೆ ಅಭಿವೃದ್ಧಿ ಮಾಡಲು ಇದನ್ನು ಉಪಯೋಗಿಸುತ್ತಿದ್ದೇವೆ ಎಂದು ಹೇಳಿದ್ದರು. ಆದರೆ ಆ ರೀತಿ ಬಂದ ಹಣವನ್ನು ಉಪಯೋಗ ಮಾಡದೆ ಬೇರೆ ಬಾಬುಗಳಿಗಾಗಿ ಖರ್ಚು ಮಾಡಿರುವುದು ನಮಗೆಲ್ಲರಿಗೂ ಗೊತ್ತಿದೆ. ಇದಕ್ಕಾಗಿ ಇದರಲ್ಲಿ ಬರುವ ಹಣವನ್ನು ಹಳ್ಳಿಗಾಡಿನ ರಸ್ತೆಗಳಿಗಾಗಿ ಅಭಿವೃದ್ಧಿ ಮಾಡಬೇಕೆಂದು ಇದರಲ್ಲಿ ಮಾಡಬಹುದು, ಇದರಿಂದ ಗ್ರಾಮಾಂತರ ಪ್ರದೇಶಗಳ ರಸ್ತೆಗಳನ್ನೂ ಅಭಿವೃದ್ಧಿ ಮಾಡಲು ಸಹಾಯವಾಗುತ್ತದೆ. ಇದಕ್ಕಾಗಿ ಈ ಬಿಲ್ಲನ್ನು ನಾವು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದು ಹೇಳುತ್ತಿದ್ದೇವೆ.

ಸರ್ಕಾರಕ್ಕೆ ಇವತ್ತು ಅನೇಕ ಬಾಬುಗಳಿಂದ ಹಣ ಬರುತ್ತದೆ. ಹೆಂಡ ಕುಡಿಯುವುದರಿಂದ ಎಷ್ಟು ತೆರಿಗೆ ಬರುತ್ತದೆ, ಯಾವ ಯಾವ ಬಾಬಿನಿಂದ ಎಷ್ಟು ಎಷ್ಟು ಹಣ ಬರುತ್ತದೆ ಅಷ್ಟನ್ನು ಅವುಗೇ ಖರ್ಚು ಮಾಡುತ್ತೀರಾ ? ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಇದನ್ನು ತೆಗೆದುಕೊಂಡು ಬರಲಿ ನೋಡೋಣ.

ಶ್ರೀ ಡಿ. ದೇವರಾಜ ಅರಸ್.—ಇದಕ್ಕೆ ಮೂರು ಕೋಟಿ ರೂಪಾಯಿಗಳು ಅಲ್ಲದೆ ಇನ್ನು ಮೂರು ಕೋಟಿ ರೂಪಾಯಿಗಳನ್ನು ಬೇಕಾದರೆ ಕೊಡೋಣ.

Road fund will not stop at this. It will be more than what it is We will double it. This is only one part of it.

5-30 P. M.

MADAM SPEAKER.—I will put the consideration motion to the Vote of the House.

The question is.—

"That the Karnataka Agricultural Produce Marketing (Regulation) Amendment Bill, 1975, be taken into consideration."

SRI H.D. DEVEGOWDA.—I press for a division.

The House divided.

The result of the division is.

Ayes—49

Noes—11

The motion was adopted.

CLAUSE—2

MADAM SPEAKER.—I will take the consideration clause by clause.

The question is.—

"That clause 2 do stand part of the Bill."

The motion was adopted.

Clause 2 was added to the Bill.

CLAUSE—1 Etc.

MADAM SPEAKER.—The question is—

"That clause 1, the long Title, preamble and enacting formula do stand part of the Bill."

SRI H.D DEVEGOWDA.—I press for a division.

The House divided.

The result of the Division is.

Ayes—49

Noes—11

The Motion was adopted.

Clause 1, the Long Title the preamble Enacting formula were added to the Bill."

Motion to pases

SRI H. M. CHANNABASAPPA.—I beg to move.—

"That the Karnataka Agricultural Produce Marketing Regulation (Amendment) Bill 1975 be passed."

MADAM SPEAKER.—The question is.—

"That the Karnataka Agrlcultural Produce Mark ting (Regnation) Amendment Bill 1975 be p assed.'

The motion was adopted and the Bill was passed.

DISCUSSION FOR SHORT DURETION

re: Scarcity conditions in some parts of the state.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ರಾಜ್ಯದ ನಾನಾ ಭಾಗಗಳಲ್ಲಿ ತಲೆದೋರಿರತಕ್ಕ ಕ್ಷಾಮದ ವಿಷಯದಲ್ಲಿ ಈ ಸಭೆಯಲ್ಲಿ ಚರ್ಚೆ ನಡೆಯುತ್ತಿದೆ. ನಾನು ನನ್ನ ಜಿಲ್ಲೆಯಾದ ಕೋಲಾರದ ಬಗ್ಗೆ ಕೆಲವು ಸೂಚನೆಗಳನ್ನು ಸರ್ಕಾರಕ್ಕೆ ಕೊಡಲಿಚ್ಛಿಸುತ್ತೇನೆ. ಕಳೆದ ವರ್ಷ ಮಳೆಗಾಲದಲ್ಲಿ ನಮ್ಮಲ್ಲಿ ಬಹಳ ತಡವಾಗಿ ಮಳೆ ಬಂತು. ಆದರೆ ಸಕಾಲದಲ್ಲಿ ಮಳೆ ಬರಲಿಲ್ಲ. ಅನೇಕ ಕಡೆ ಬಿತ್ತನೆಯಾಗ ಬೇಕಾಗಿದ್ದರೂ ತಡವಾಗಿ ಬಂದ ಮಳೆಯ ದೆಸೆಯಿಂದ ಸುಮಾರು ಒಂದರಿಂದ ಎರಡು ತಿಂಗಳುಗಳ ಕಾಲ ತಡವಾಗಿ ಬಿತ್ತನೆಯಾಯಿತು. ಆದರೂ ಸಹ ಶೇಕಡ ೨೫ ರಷ್ಟು ಬೆಳೆಯಾಗಲಿಲ್ಲ. ಕೆಲವು ಪಾಕೆಟ್ ಗಳಲ್ಲಿ ಕೆರೆಕಟ್ಟೆಗಳ ಕೆಳಗಡೆ ಬೆಳೆಯಾಗಿದೆ. ಆದರೆ ಬಹಳ ಭಾಗಗಳಲ್ಲಿ ಬೆಳೆಯಾಗಲಿಲ್ಲ. ಇದನ್ನು ಅನೇಕ ಸಾರಿ ನಾವು ಸರ್ಕಾರದ ಗಮನಕ್ಕೆ ತಂದರೂ ಈ ವಿಷಯದಲ್ಲಿ ಅಧಿಕಾರಿಗಳಿಂದ ಸರ್ಕಾರಕ್ಕೆ ವರದಿ ಬಂದಿಲ್ಲ. ಅಲ್ಲಿ ಅಭಾವ ಇಲ್ಲ ಎಂದು ತಿಳಿಸಿದ್ದಾರೆ. ಆದರೆ ಪರಿಸ್ಥಿತಿ ಆ ರೀತಿಯಿಲ್ಲ. ಮಳೆ ಬರಲಿಲ್ಲ ಆದ್ದರಿಂದ ಬೆಳೆ ಸಂಪೂರ್ಣವಾಗಿ ನಾಶವಾಗಿದೆ ಎಂದು ಹೇಳಬಹುದು. ಮಳೆ ಸಂಪೂರ್ಣವಾಗಿ ಬರಲಿಲ್ಲ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ, ಮಳೆ ಬಂದಿದೆ, ಆದರೆ ಕೆಲವು ಕಡೆ ಬಂದಿದೆ ಕೆಲವುಕಡೆ ಬಂದಿಲ್ಲ ಆದರೆ ಬಹಳ ಭಾಗದಲ್ಲಿ ಸರಿಯಾದ ರೀತಿಯಲ್ಲಿ ಮಳೆ ಬಂದಿಲ್ಲ.

ಮತ್ತೆ ಇನ್ನೊಂದು ವಿಷಯ ಏನೆಂದರೆ ಅತಿ ಪ್ರಾಮುಖ್ಯವಾದ ವಿಷಯ ಈ ಸಂದರ್ಭದಲ್ಲಿ ತಿಳಿಸ ಬೇಕಾಗಿರತಕ್ಕಂಥಾದ್ದು ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರು ಪ್ರವಾಸ ಕೈಗೊಂಡಾಗ್ಗೆ ನಾನು ತಿಳಿಸಿದ್ದೇನೆ. ಅದು ಏನೆಂದರೆ ನಮ್ಮ ತಾಲ್ಲೂಕಿನ ಕುಡಿಯುವ ನೀರಿನ ಬಗ್ಗೆ ಒಂದು ದೊಡ್ಡ ಪಟ್ಟಿಯನ್ನೇ ಮಾನ್ಯ ಶ್ರೀ ಎನ್. ಹುಚ್ಚಮಾಸ್ತಿಗೌಡರಿಗೆ ಮತ್ತು ಲೋಕೋಪಯೋಗಿ ಮಂತ್ರಿಗಳಾದ ಮಾನ್ಯ ಶ್ರೀ ಹೆಚ್.ಎಂ. ಚನ್ನಬಸಪ್ಪನವರಿಗೆ ಮತ್ತು ಮುಖ್ಯಮಂತ್ರಿಗಳಿಗೂ ಕೂಡ ಕೊಟ್ಟಿದ್ದೇನೆ ಮತ್ತು ಅವರಲ್ಲಿ ಪ್ರಾರ್ಥನೆ ಮಾಡಿ ಕೊಂಡಿದ್ದೇನೆ. ಕೋಲಾರ ತಾಲ್ಲೂಕಿನ ೭೦ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇ[illegible] ನಿನ್ನೆ ಮೊನ್ನೆ ದಿವಸ ನನ್ನ ಗಮನ ಸೆಳೆಯುವ ಸೂಚನೆಗೆ ಉತ್ತರವಾಗಿ ಶ್ರೀಮಾನ್ ರಾಚಯ್ಯನವರೇ ಸುಮಾರು ೭೦ ಗ್ರಾಮಗಳಿಗೆ ಕುಡಿಯುವ ನೀರಿಗೆ ತೊಂದರೆ ಇದೆ ಎಂದು ಹೇಳಿದರು. ಅದರಲ್ಲಿ ಈವೊತ್ತು ರಿಗ್ ಹಾಕಿರತಕ್ಕಂಥಾದ್ದು ಕೇವಲ ೧೧ ಗ್ರಾಮಗಳಿಗೆ ಹಾಕಿದ್ದೀರಿ. ಇನ್ನು ೫೦ ಗ್ರಾಮಗಳಲ್ಲಿ ಈವೊತ್ತು ಕುಡಿಯುವ ನೀರಿಗೆ ಸಾಕಷ್ಟು ತೊಂದರೆ ಇದೆ. ಅರ್ಧ ಮೈಲಿ, ಒಂದು ಮೈಲಿ ಹೋಗಿ ಕೊಡ ಹಿಡಿದು ಕೊಂಡು ಹೋಗಿ ನೀರು ತರುವ ತಾಪತ್ರಯ ಇದೆ ಹೀಗಿರುವ ಅಲ್ಲಿಯ ಜಿಲ್ಲಾಧಿಕಾರಿಗಳು ಕುಡಿಯುವ ನೀರಿಗೆ ತಾಪತ್ರಯ ಇಲ್ಲ ಅಂತ ಇಂಥಾ ವರದಿ ಏತಕ್ಕೆ ಕಳುಹಿಸಿದ್ದಾರೋ ಗೊತ್ತಾಗುವುದಿಲ್ಲ. ಇಂಥಾ ಒಂದು ವರದಿಯನ್ನು ನಾನು ಖಂಡಿಸಬೇಕಾಗಿದೆ. ಆ ಜಿಲ್ಲಾಧಿಕಾರಿಗಳಿಗೆ ಹಳ್ಳಿಗಳಿಗೆ ಹೋಗಿ ಜನರ ಕಷ್ಟಸುಖಗಳನ್ನು ನೋಡುವ ವ್ಯವಧಾನವಿಲ್ಲ. ಅವರಿಗೆ ಸಾಮಾನ್ಯ ಜನರ ಕಷ್ಟವನ್ನು ಕೇಳುವ ವ್ಯವಧಾನವಿಲ್ಲ. ಈ ಪ್ರಶ್ನೆಯನ್ನು ಜಿಲ್ಲಾಭಿವೃದ್ಧಿ ಮಂಡಲಿಯಲ್ಲಿ ಪ್ರಸ್ತಾಪವಾಗದ್ದರೂ ಕೂಡ ಜಿಲ್ಲಾಧಿಕಾರಿಗಳು ಇಂಥಾ ಒಂದು ವರದಿಯನ್ನು ಏತಕ್ಕೆ ಒಪ್ಪಿದರೋ ಗೊತ್ತಿಲ್ಲ. ಆದುದರಿಂದ ಅವರು ಕಳುಹಿಸಿರತಕ್ಕಂಥ ಈ ವರದಿ ಸರಿ ಯಾದುದಲ್ಲ ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಕೋಲಾರ ಜಿಲ್ಲೆ